KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜುಲೈ ೧, ೨೦೧೦ (ಆಷಾಢ ೧೦, ಶಕ ವರ್ಷ ೧೯೩೨)	ಸಂಚಿಕೆ ೨೬

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ENERGY SECRETARIAT

Sub : Availing power from priyadarshini Jurala (6 x 39.1 MW) Hydro Electric Project

Read : **1.** G.O. No. DE 240 PPC 95 dated 14-09-2009.
2. Finance Department Endorsement No. FD 90 EXP-I/2010 dated 28-04-2010.

Preamble:

1. Jurala Hydro Electric Project is a multi-purpose project, mainly for irrigation cum Hydro power generation across Krishna River, near Revulapally Village in Mehaboob Nagar District of Andhra Pradesh with an installed capacity of 6 x 39.1 MW (234.6 MW) and annual energy generation of 364 MU.
2. The Government of Andhra Pradesh have already implemented the Irrigation component of the project and the cost towards Power Block is Rs. 143.00 Crores (Rupees One hundred and forty three crores only), that is, the cost proportional to the benefit. This cost has to be shared by the State of Karnataka and the State of Andhra Pradesh. The State of Karnataka has agreed to pay Rs. 70.00 Crores (Rupees Seventy Crores only) towards the share after signing of Memorandum of Agreement.
3. As per the Agreement, Karnataka will draw 50% of the power from this project by paying 50% of the cost of Power Block, which is Rs. 70.00 Crores and the Tariff for which is to be determined by the Central Electricity Regulatory Commission (CERC) as the balance cost of the project is to be built in to the Tariff. Further, it is agreed that APGENCO shall enter into a PPA with both the APTRANSCO and Distribution Companies with the prior approval of the competent Regulatory Commission. Karnataka will get about 182 million units (estimated energy) of power from the Jurala Hydro Electric Project annually.
4. In the Govt. Order read at (1) above, approval was accorded for the following :
   a) To enter into Memorandum of Agreement between Govt. of Karnataka and Govt. of Andhra Pradesh for availing power from Priyadarshini Jurala Hydro Electric Project.
   b) Electricity Supply Company to pay the amount of Rs. 70.00 Crores through Power Company of Karnataka Limited towards 50% of Power Block cost in proportion to the allocation of power from Jurala Hydro Electric Project.
5. Managing Director, Power Company of Karnataka Limited has informed Government that Electricity Supply Companies (ESCOMs) are financially not sound to pay Rs. 70.00 Crores. Therefore, Government has examined and decided to pay Rs. 70 Crores from the Budget provision of Rs. 500 Crores. Hence, the following order :

Government Order No. EN 4 PPC 2010, Bangalore, Dated 4th May 2010.

1. Under the circumstances explained in the Preamble, Government are pleased to accord approval to release of Rs. 70.00 Crores (Rupees Seventy Crores only) to Karnataka Power Transmission Corporation Limited (KPTCL) under the Head of Account 4801-01-190-0-09 (Plan) Investment in Power Utility 211-Investment for Equity Investment in Power Utilities during 2010-11 towards 50% of the cost of the Power Block payable by Power Company of Karnataka Limited (PCKL) to draw 50% of the power from Jurala Hydro Electric Project on behalf of Electricity Supply Companies (ESCOMs).
2. KPTCL shall obtain the Counter Signature of the Additional Chief Secretary to Government, Energy Department on payee's receipt, draw the amount and pay it to Power Company of Karnataka Limited (PCKL) immediately.
3. Power Company of Karnataka Limited (PCKL) to take further necessary action to get the 50% of power from the said project immediately.
4. This Order is issued with the concurrence of Finance Department vide their Note No. FD 90 EXP-I/2010 dated 28-04-2010.

PR. 1227

By Order and in the name of the Governor of Karnataka,

S.J. SAMPATH KUMAR
Under Secretary to Government,
Energy Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ವಿ.ವಿ. ಪುಣೇದ್, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಔರಾದ್ ತಾಲ್ಲೂಕು, ಔರಾದ್ ಇವರ ವಿರುದ್ಧ ಇಲಾಖಾ ವಿಚಾರಣೆ–ಅಂತಿಮ ಆದೇಶ.

ಉಲ್ಲೇಖ : 1. ದಿನಾಂಕ : 21–8–07 ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 046 ಎಸ್ಇಎನ್ 07
2. ಶ್ರೀ ವಿ.ಪಿ. ಕೆದಿಲಾಯ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ವಿಚಾರಣಾ ವರದಿ ದಿನಾಂಕ : 22–9–09.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ವಿ.ವಿ. ಪುಣೇದ್, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ಔರಾದ್ ತಾಲ್ಲೂಕು, ಔರಾದ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ರಜೆ ಮುಗಿದ ನಂತರವೂ ಕರ್ತವ್ಯಕ್ಕೆ ಹಾಜರಾಗದಿರುವುದು ಮಂಜೂರಾತಿ ಪಡೆಯದೇ ರಜೆಯ ಮೇಲೆ ತೆರಳಿರುವುದು, ಪೂರ್ವಾನುಮತಿ ಪಡಯದೇ ಕೇಂದ್ರ ಸ್ಥಾನ ಬಿಡುವುದು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯ ಇಲ್ಲದಿರುವುದು, ಕಾನೂನು ಬಾಹಿರವಾಗಿ ತಾಲ್ಲೂಕು ಪಂಚಾಯತ್ ಸ್ಥಾಯಿ ಸಮಿತಿ ರಚನೆ ನಿರ್ಣಯವನ್ನು ಕೈಗೊಂಡು ನಡವಳಿಗೆ ಸಹಿ ಮಾಡಿರುವುದು, ಚಿಕನ್‌ಗುನ್ಯಾ ರೋಗ ನಿಯಂತ್ರಣದ ನೋಡಲ್ ಅಧಿಕಾರಿಯವರು ಭೇಟಿ ನೀಡಿದ ಸಮಯದಲ್ಲಿ ಗೈರುಹಾಜರಾಗಿರುವುದು ಮೇಲಾಧಿಕಾರಿಗಳ ಅನುಮತಿ ಪಡೆಯದೆ ಸಚಿವರ ಸಭೆಯಲ್ಲಿ ಹಾಜರಾಗಿರುವುದು ಇತ್ಯಾದಿಗಳ ಆರೋಪಗಳಲ್ಲಿನ ಸತ್ಯಾಸತ್ಯತೆಯನ್ನು ವಿಚಾರಣೆಯ ಮೂಲಕ ತಿಳಿಯುವ ಸಲುವಾಗಿ, ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 11 (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ವಿ.ಪಿ. ಕೆದಿಲಾಯ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿ, ಶ್ರೀ ಪುಣೇದ್ ರವರು ಕಾರ್ಯನಿರ್ವಾಹಕ ಅಧಿಕಾರಿ, ಔರಾದ್ ತಾಲ್ಲೂಕು, ಔರಾದ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ರಜೆ ಮುಗಿದು ದಿನಾಂಕ : 1–8–05 ರಂದು ಕರ್ತವ್ಯಕ್ಕೆ ಹಾಜರಾಗಬೇಕಿದ್ದರೂ ಹಾಗೂ ತಾಲ್ಲೂಕಿನಲ್ಲಿ ಕರುಳುಬೇನೆ ವ್ಯಾಪಕವಾಗಿ ಹರಡಿ ಪರಿಸ್ಥಿತಿಯು ಗಂಭೀರವಾಗಿದ್ದರೂ ಇವರು ಗೈರುಹಾಜರಾಗಿರುವುದು, ಪೂರ್ವ ಮಂಜೂರಾತಿ ಪಡೆಯದೇ ಮೇಲಿಂದ ಮೇಲೆ ರಜೆಯ ಮೇಲೆ ತೆರಳುವುದು ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನ ಬಿಡುವುದು ಕೇಂದ್ರ ಸ್ಥಾನದಲ್ಲಿ ವಾಸ್ತವ್ಯವಿರಬೇಕೆಂದು ಸೂಚಿಸಿದ್ದರೂ ವಾಸ್ತವ್ಯ ಇಲ್ಲದಿರುವುದು, ತಾಲ್ಲೂಕು ಪಂಚಾಯತ್‌ನ ಸಾಮಾನ್ಯ ಸಭೆಯ ಅಜೆಂಡಾದಲ್ಲಿ ವಿಷಯ ಇಲ್ಲದಿದ್ದರೂ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸದಿದ್ದರೂ ನಿರ್ಣಯಿಸಲಾಗಿದೆ ಎಂದು ನಡವಳಿಯಲ್ಲಿ ದಾಖಲಿಸಿ ಕಾನೂನು ಬಾಹಿರವಾಗಿ ನಡವಳಿಗೆ ಸಹಿ ಮಾಡಿರುವುದು, ಚಿಕನ್‌ಗುನ್ಯಾ ರೋಗ ನಿಯಂತ್ರಣದ ಸಂಬಂಧವಾಗಿ ಹಿರಿಯ ಅಧಿಕಾರಿಯು ಭೇಟಿ ನೀಡಿದ ಸಂದರ್ಭದಲ್ಲಿ ಕಛೇರಿಯಲ್ಲಿ ಹಾಜರಿಲ್ಲದಿರುವುದು ಮತ್ತು ರೋಗ ನಿಯಂತ್ರಣ ಕರಪತ್ರಗಳನ್ನು, ಭಿತ್ತಿಪತ್ರಗಳನ್ನು

ಸಾರ್ವಜನಿಕರಿಗೆ ವಿತರಣೆ ಮಾಡಿಲ್ಲದಿರುವುದು ಮೇಲಾಧಿಕಾರಿಗಳ ಅನುಮತಿ ಇಲ್ಲದೆ ಬೆಂಗಳೂರಿನ ಸಭೆಯಲ್ಲಿ ಭಾಗವಹಿಸಿರುವುದು ಇತ್ಯಾದಿ ಆರೋಪಗಳು ವಿಚಾರಣಾ ಸಮಯದಲ್ಲಿ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದಾಗಿ ತಿಳಿಸಿರುತ್ತಾರೆ. ವಿಚಾರಣಾ ವರದಿಯನ್ನು ಪರಿಶೀಲಿಸಿ, ಸರ್ಕಾರವು ಅಂಗೀಕರಿಸುತ್ತಾ, ಆರೋಪಕ್ಕೆ ತಕ್ಕುದಾದ ದಂಡನೆಯನ್ನು ವಿಧಿಸುವ ಪೂರ್ವದಲ್ಲಿ ಪ್ರಕ್ರಿಯೆಯನ್ನು ಪಾಲಿಸಿದ ನಂತರ ಆರೋಪಿತ ಅಧಿಕಾರಿಯು ಸಲ್ಲಿಸಿದ ಲಿಖಿತ ಅಹವಾಲಿನಲ್ಲಿ ಆರೋಪಮುಕ್ತಗೊಳಿಸಲು ಪರಿಗಣಿಸುವಂತಹ ಯಾವುದೇ ಹೊಸ ಅಂಶಗಳು ಕಂಡುಬಂದಿಲ್ಲವಾದ್ದರಿಂದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 081 ಕೆಇವಿ 07, ಬೆಂಗಳೂರು, ದಿನಾಂಕ: 08ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8 (iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ವಿ.ವಿ. ಪುಣೇದ್, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ಔರಾದ್ ತಾಲ್ಲೂಕ್, ಔರಾದ್ (ಹಾಲಿ ವಿಶೇಷ ಭೂಸ್ವಾಧೀನಾಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ, ಬೀಳಗಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ) ಇವರಿಗೆ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಬೀರದಂತೆ (without cumulative effect) ತಡೆಹಿಡಿಯುವ ದಂಡನೆ ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1013

(ಹೆಚ್.ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ಪುನರ್ವಸತಿ ಅಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ ನಾರಾಯಣಪುರ ಇವರ ವಿರುದ್ಧ ಇಲಾಖಾ ವಿಚಾರಣೆ–ಅಂತಿಮ ಆದೇಶ.

ಉಲ್ಲೇಖ : 1. ದಿನಾಂಕ : 29–01–04 ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 067 ಎಸ್ಇಎನ್ 97

2. ಶ್ರೀ ಬಿ. ಶ್ರೀನಿವಾಸರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ವರದಿ ದಿನಾಂಕ : 15–12–08.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ, ಇವರು ಈ ಹಿಂದೆ ಪುನರ್ವಸತಿ ಅಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ, ನಾರಾಯಣಪುರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಪರಿಹಾರಧನ ವಿತರಿಸುವಲ್ಲಿ ಫೋಟೋ ಪ್ರತಿಗಳ ಆಧಾರದ ಮೇಲೆ ಸಂತ್ರಸ್ತರಿಗೆ ಮನೆ ಕಟ್ಟಿಕೊಳ್ಳಲು ಪರಿಹಾರ ವಿತರಿಸಿರುವುದು, ಮೃತಪಟ್ಟ ಸಂತ್ರಸ್ಥರ ಅನರ್ಹ ವಾರಸುದಾರರಿಗೆ ಅನುಕಂಪ ಪರಿಹಾರ ಭತ್ಯೆ ವಿತರಿಸಿರುವುದು, ಪರಿಹಾರ ವಿತರಿಸಿದ ವಿವರಗಳನ್ನು ಕಛೇರಿಯ ವಹಿಯಲ್ಲಿ ನಮೂದಿಸದಿರುವುದು ಸಂತ್ರಸ್ಥರೊಬ್ಬರಿಗೆ ಎರಡು ಸಲ ಪರಿಹಾರ ವಿತರಿಸಿರುವುದು ಎರಡನೇ ಬಾರಿ ವಿತರಿಸಿದ ಮೊತ್ತವನ್ನು ವಾಪಸ್ಸು ಪಡೆದು ಬ್ಯಾಂಕಿಗೆ ಜಮೇ ಮಾಡುವ ಮೂಲಕ ಸರ್ಕಾರಿ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗ ಮಾಡಿರುವುದು ಸಂತ್ರಸ್ಥರ ಪ್ರವರ್ಗವನ್ನು ನಿಗಧಿಪಡಿಸುವಲ್ಲಿ ಕರ್ತವ್ಯ ಚ್ಯುತಿ ಎಸಗಿರುವುದು ಸಂತ್ರಸ್ಥರ ಮಕ್ಕಳು ಅನರ್ಹರಾಗಿದ್ದರೂ ಅನುಕಂಪ ಭತ್ಯೆ ಪಾವತಿಸಿರುವುದು ಮಧ್ಯವರ್ತಿಗಳ ಮೂಲಕ ಪರಿಹಾರ ಚೆಕ್ಕನ್ನು ವಿತರಿಸಿರುವುದು ಇತ್ಯಾದಿಗಳ ಮೂಲಕ ಅಧಿಕಾರ ದುರುಪಯೋಗ ಮತ್ತು ದುರ್ನಡತೆ ಎಸಗಿರುವ ಆರೋಪದಲ್ಲಿನ ಸತ್ಯಾಸತ್ಯತೆಯನ್ನು ವಿಚಾರಣೆಯ ಮೂಲಕ ತಿಳಿಯುವ ಸಲುವಾಗಿ, ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 11 (2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆರೋಪದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ಬಿ. ಶ್ರೀನಿವಾಸರಾವ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, ವಿಚಾರಣಾಧಿಕಾರಿಗಳು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ), ಅಧಿಕಾರಿ, ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ವಿಚಾರಣಾ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ ವಿಚಾರಣಾ ಪ್ರಾಧಿಕಾರವು ಆರೋಪ–4 ರುಜುವಾತಾಗಿರುವುದಿಲ್ಲವೆಂದು ನೀಡಿರುವ ಕಾರಣಗಳನ್ನು ಶಿಸ್ತು ಪ್ರಾಧಿಕಾರಿಯು ಒಪ್ಪಿರುವುದಿಲ್ಲ ಅರ್ಹರಲ್ಲದವರಿಗೆ ಅನುಕಂಪ ಪರಿಹಾರ ಭತ್ಯೆಯನ್ನು ಪಾವತಿಸಿ ನಂತರ ಅದನ್ನು ವಾಪಸ್ಸು ಪಡೆದು ಬ್ಯಾಂಕಿಗೆ ಜಮಾ ಮಾಡಿರುವ ಈ ಆರೋಪದ ಬಗ್ಗೆ ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ ಹಾಜರಾದ ಸಾಕ್ಷಿದಾರರ ಸಾಕ್ಷ್ಯವನ್ನು ಮಾತ್ರ ಅವಲಂಭಿಸಿರುವುದು ಹಾಗೂ ಯಾವುದೇ ದಾಖಲೆಗಳ ಅವಲಂಬನೆಯ ಉಲ್ಲೇಖ ಮಾಡಿಲ್ಲದಿರುವುದು ವಿಚಾರಣಾ ವರದಿಯಿಂದ ಕಂಡುಬರುತ್ತದೆ ಅಲ್ಲದೆ ಅನರ್ಹರಿಗೆ ಚೆಕ್ಕಿನ ಮೂಲದ ಪಾವತಿಸಿದ

ಪರಿಹಾರದ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಹಿಂದಕ್ಕೆ ಪಡೆದಿರುವುದು ದಾಖಲೆಗಳಿಂದ ಸುಸ್ಪಷ್ಟವಾಗುವುದರಿಂದ, ತಾತ್ಕಾಲಿಕವಾಗಿ ಸರ್ಕಾರದ ಹಣವು ದುರುಪಯೋಗವಾಗಿರುವ ಆರೋಪವು ಸಾಬೀತಾಗುತ್ತದೆ ಎಂದು ಸರ್ಕಾರವು ನಿರ್ಣಯಿಸಿ, ಇದರಿಂದಾಗಿ ಆರೋಪಿತ ಅಧಿಕಾರಿಯು ಕರ್ತವ್ಯ ಚ್ಯುತಿ ಎಸಗಿದ್ದು ಈ ಕರ್ತವ್ಯ ಚ್ಯುತಿಗೆ ಸೂಕ್ತ ದಂಡನೆಯನ್ನು ವಿಧಿಸುವ ಪೂರ್ವದಲ್ಲಿ ಪ್ರಕ್ರಿಯೆಯನ್ನು ಪಾಲಿಸಿದ ನಂತರ ಆರೋಪಿತ ಅಧಿಕಾರಿಯು ಸಲ್ಲಿಸಿದ ಲಿಖಿತ ಅಹವಾಲಿನಲ್ಲಿ ಆರೋಪಮುಕ್ತಗೊಳಿಸಲು ಪರಿಗಣಿಸುವಂತಹ ಯಾವುದೇ ಹೊಸ ಅಂಶಗಳು ಕಂಡುಬಂದಿಲ್ಲವಾದ್ದರಿಂದ ಆರೋಪ–4ರ ಬಗ್ಗೆ ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ನು ತಿರಸ್ಕರಿಸುತ್ತಾ ಹಾಗೂ ಉಳಿದ ಆರೋಪಗಳ ಬಗ್ಗೆ ನೀಡಿರುವ ವಿಚಾರಣಾ ವರದಿಯನ್ನು ಅಂಗೀಕರಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 010 ಕೆಇವಿ 07, ಬೆಂಗಳೂರು, ದಿನಾಂಕ: 07ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8 (ii) ರ ಪ್ರಕಾರ ಶ್ರೀ ಎನ್.ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ), ವಿಶೇಷ ಭೂ ಸ್ವಾಧೀನಾಧಿಕಾರಿ, ಬೆಂಗಳೂರು ಇವರಿಗೆ ವಾಗ್ದಂಡನೆ (Censure) ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1014

(ಹೆಚ್.ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ವಸತಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಪಟ್ಟಣ ಆಶ್ರಯ ಸಮಿತಿಯ ಅಧ್ಯಕ್ಷರ ನಾಮನಿರ್ದೇಶನ ಕುರಿತು

ಉಲ್ಲೇಖ :
1. ಸರ್ಕಾರದ ಆದೇಶ ಸಂ : ವಇ/42/ಹೆಚ್ಎಎಂ/1999, ದಿನಾಂಕ : 10–5–2000
2. ಸರ್ಕಾರಿ ಆದೇಶ ಸಂ : ವಇ/18/ಹೆಚ್ಎಎಸ್/2008, ದಿನಾಂಕ : 16–9–2009
3. ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿ ಸಂಖ್ಯೆ : ಮು.ಮಂ/56/ಅಕಾ/2010, ದಿನಾಂಕ : 26–3–2010

ಪ್ರಸ್ತಾವನೆ :

ಮಾನ್ಯ ಮುಖ್ಯಮಂತ್ರಿಗಳು, ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ನಗರ ಆಶ್ರಯ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್.ಎಸ್. ಶಾಂತವೀರಪ್ಪಗೌಡ ಇವರ ನಾಮ ನಿರ್ದೇಶನವನ್ನು ರದ್ದುಪಡಿಸಿ ಇವರ ಬದಲಿಗೆ ಶ್ರೀ ಟಿ.ಎಸ್. ಮಹಾಲಿಂಗಪ್ಪ ಬಿನ್ ಸಿದ್ದಪ್ಪ ದೊಡ್ಡಕೇರಿ, ಶಿಕಾರಿಪುರ ಟೌನ್ ಇವರನ್ನು ಅಧ್ಯಕ್ಷರನ್ನಾಗಿ ನಾಮ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ/23/ಹೆಚ್ಎಎಸ್/2010, ಬೆಂಗಳೂರು, ದಿನಾಂಕ: 29–3–2010

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ನಗರ ಆಶ್ರಯ ಸಮಿತಿಗೆ ಶ್ರೀ ಹೆಚ್.ಎಸ್. ಶಾಂತವೀರಪ್ಪಗೌಡ ಇವರ ಬದಲಾಗಿ ಶ್ರೀ ಟಿ.ಎಸ್. ಮಹಾಲಿಂಗಪ್ಪ ಬಿನ್ ಸಿದ್ದಪ್ಪ, ದೊಡ್ಡಕೇರಿ, ಶಿಕಾರಿಪುರ ಟೌನ್ ಇವರನ್ನು ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1015

(ಕೆ.ಆರ್. ವಲ್ಲೂರ)

ಪೀಠಾಧಿಕಾರಿ–2, ವಸತಿ ಇಲಾಖೆ

ವಸತಿ ಸಚಿವಾಲಯ

ಸಂ. ವಇ 16 ಹೆಚ್ಎಹೆಚ್ 2010, ಬೆಂಗಳೂರು, ದಿನಾಂಕ 27ನೇ ಮಾರ್ಚ್ 2010

ತಿದ್ದುಪಡಿ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್ಎಹೆಚ್ 2010, ದಿನಾಂಕ : 12–3–2010
2. ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ. ಮುಮಕಾ 18118 2010, ದಿನಾಂಕ : 25–3–2010.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ವಸತಿ ಇಲಾಖೆಯಿಂದ ನಿರ್ಮಿಸಲು ಪ್ರಸ್ತಾಪಿಸಲಾಗಿರುವ 10,387 ಮನೆಗಳಲ್ಲಿ 7,376 ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ನಿರ್ಮಿತಿ ಕೇಂದ್ರಗಳ ಮುಖಾಂತರ ನಿರ್ಮಿಸಲು ಮತ್ತು ಉಳಿದ 3,011 ಮನೆಗಳನ್ನು

ಕರ್ನಾಟಕ ಗೃಹ ಮಂಡಳಿಯ ಮುಖಾಂತರ ನಿರ್ಮಿಸಲು ಮೇಲೆ (1) ರಲ್ಲಿನ ಉಲ್ಲೇಖಿತ ಆದೇಶದಲ್ಲಿ ಸರ್ಕಾರದ ಅನುಮೋದನೆ ನೀಡಲಾಗಿತ್ತು. ಆದರೆ, ಮೇಲೆ (2) ರಲ್ಲಿನ ಉಲ್ಲೇಖಿತ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ನಿರ್ಮಿಸಲು ಪ್ರಸ್ತಾಪಿಸಲ್ಪಟ್ಟಿರುವ ಒಟ್ಟು ಗ್ರಾಮಗಳ ಸಂಖ್ಯೆಯು 10525 ಕ್ಕೆ ಮಾರ್ಪಾಡುಗೊಂಡಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ನಿರ್ಮಿಸಬೇಕಾದ ಮನೆಗಳ ಪಟ್ಟಿಯನ್ನು ಸರ್ಕಾರದ ಆದೇಶಕ್ಕೆ ಲಗತ್ತಿಸಿದ ಅನುಬಂಧ "ಅ" ಇದರ ಬದಲಾಗಿ ಈ ತಿದ್ದುಪಡಿಗೆ ಲಗತ್ತಿಸಿದ ಅನುಬಂಧ "1" ಪಟ್ಟಿಯನ್ನೂ ಮತ್ತು ಕರ್ನಾಟಕ ಗೃಹ ಮಂಡಳಿಯ ಮುಖಾಂತರ ನಿರ್ಮಿಸಲ್ಪಡುವ ಮನೆಗಳ ಪಟ್ಟಿಯನ್ನು ಅನುಬಂಧ "ಆ" ಇದರ ಬದಲಾಗಿ ಲಗತ್ತಿಸಿದ ಅನುಬಂಧ "2" ಪಟ್ಟಿಯನ್ನು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ.ಆರ್. ವಲ್ಲೂರ)

ಪೀಠಾಧಿಕಾರಿ–2, ವಸತಿ ಇಲಾಖೆ

ಅನುಬಂಧ–"1"

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ನಿರ್ಮಿಸಬೇಕಾದ ಮನೆಗಳ ವಿವರಗಳು

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ	ಮನೆಗಳ ಸಂಖ್ಯೆ	ಗ್ರಾಮಗಳ ಸಂಖ್ಯೆ
1	ಬಿಜಾಪುರ	ಇಂಡಿ	ದಸುರ	202	
			ನಾಗರಹಳ್ಳಿ	55	
			ಟಾಕಳಿ	269	
			ತೆಗ್ಗಳ್ಳಿ	286	
			ಅಗರಖೇಡ	149	
			ಭುಯ್ಯಾರ	101	
			ಖೇಡಗಿ	98	
			ಮಿರಗಿ	40	
			ರೂಡಗಿ	94	
			ಚಿಕ್ಕಮಣ್ಣೂರ	38	
			ನಿವರಗಿ	23	
			ಬರಗುಡಿ	36	
			ವಾಡೆ	208	
			ಚನೆಗಾಂವ	71	
			ಉಮರಜ	77	15
2.	ಗದಗ	ರೋಣ	ಅಮರಗೋಳ	350	
			ಗಾಡಗೋಳಿ	504	
			ಮೆಣಸಗಿ	1313	
			ಕುರುವಿನಕೊಪ್ಪ	121	
			ಹೊಳೆಮಣ್ಣೂರು	554	5
		ನರಗುಂದ	ಕುರ್ಲಗೇರಿ	458	
			ಬೂದಿಹಾಳ	174	
			ಸುರಕೋಡ	648	3
3.	ಧಾರವಾಡ	ನವಲಗುಂದ	ಅಹೆಟ್ಟಿ	55	
			ಅಮರಗೊಳ	150	
			ಗುಡಿಸಾಗರ	100	3
		ಕುಂದಗೋಳ	ಮುಳ್ಳೊಳ್ಳಿ	320	1
4.	ಬಾಗಲಕೋಟೆ	ಹುನಗುಂದ	ಚಿಕ್ಕಮಾಗಿ	417	
			ಚಿತ್ತರಗಿ	640	2
			ಒಟ್ಟು	7551	29

(ಕೆ.ಆರ್. ವಲ್ಲೂರ)

ಪೀಠಾಧಿಕಾರಿ–2, ವಸತಿ ಇಲಾಖೆ

ಅನುಬಂಧ "2"

ಕರ್ನಾಟಕ ಗೃಹ ಮಂಡಳಿಯು ನಿರ್ಮಿಸಬೇಕಾದ ಮನೆಗಳ ವಿವರಗಳು

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಗ್ರಾಮ	ಮನೆಗಳ ಸಂಖ್ಯೆ	ಗ್ರಾಮಗಳ ಸಂಖ್ಯೆ
1.	ಬಾಗಲಕೋಟೆ	ಬಾದಾಮಿ	ನೀಲರಗಿ	202	
			ಗೋನಾಳ	70	
			ಹಿರೇನಸಬಿ	81	
			ಸುಳ್ಳ	349	4
		ಹುನಗುಂದ	ಸುರುಳಿಕಲ್ಲು	226	
			ಬೆನಾಳ	264	
			ಇಳಕಲ್	500	3
		ಮುಧೋಳ	ಒಂಟಿಗೋಡಿ	404	1
2.	ಬಿಜಾಪುರ	ಬ. ಬಾಗೇವಾಡಿ	ನಾಗರಾಳ ಡೋಣ	116	
			ಚಿಕ್ಕಗರಸಂಗಿ	101	2
		ಮುದ್ದೇಬಿಹಾಳ	ಗಂಗೂರ	41	
			ಬೋಳವಾಡ	195	2
		ಸಿಂಧಗಿ	ಬೂದಿಹಾಳ ಡೋಣ	201	
			ದೇವನಗಾಂವ್	77	
			ನಂದಗೇರಿ	147	3
			ಒಟ್ಟು	2974	15

(ಕೆ.ಆರ್. ವಲ್ಲೂರ)
ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. 1016

ಜಲಸಂಪನ್ಮೂಲ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನದಿಗೆ ಚಳ್ಳಕೋಡ (ಮಜರೆ) ಹತ್ತಿರ ಪ್ರವಾಹ ನಿಯಂತ್ರಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸನೀಇ 15 ಮಸಾವಿ 2009,(4), ದಿನಾಂಕ : 26-2-2009
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ : ಮುಇಂ/ಸನೀ (ಉ) ವಲಯ/ಬಿಜೆಪಿ/ಪಿಬಿ-2/2009-10/7012, ದಿನಾಂಕ: 20-1-2010
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 2-2-2010ರ ಪತ್ರ ಸಂಖ್ಯೆ : ಮುಸದ/ಆಪ್ತ ಶಾಖೆ/ಟೆಂಡರ್/134.

ಪ್ರಸ್ತಾವನೆ :

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನದಿಗೆ ಚಳ್ಳಕೋಡ (ಮಜರೆ) ಹತ್ತಿರ ಪ್ರವಾಹ ನಿಯಂತ್ರಣ ಕಾಮಗಾರಿಯ ರೂ. 50.00 ಲಕ್ಷ ಅಂದಾಜು ಪಟ್ಟಿಗೆ ಮೇಲೆ (1) ರಲ್ಲಿ ಓದಲಾದ ದಿನಾಂಕ : 26-2-2009ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಳಿಯಾಳ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	ದಿನಾಂಕ : 21-2-2009
ಕನ್ನಡ ಪ್ರಭ ದಿನಪತ್ರಿಕೆ	ದಿನಾಂಕ : 4-3-2009

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡಿ ಅಂತಿಮವಾಗಿ ದಿನಾಂಕ : 14-6-2009 ರಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ 8 ಜನ ಗುತ್ತಿಗೆದಾರರ ಪೈಕಿ ನಿಗದಿತ ದಿನದಂದು ಇಬ್ಬರು ಗುತ್ತಿಗೆದಾರರು ಮಾತ್ರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಇವರ ಟೆಂಡರಗಳನ್ನು ದಿನಾಂಕ : 22-7-2009 ರಂದು ತೆರೆಯಲಾಗಿದ್ದು ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿರುತ್ತದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 48,66,354/-	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಜಿ.ಎಸ್. ಗುನಗಾ, 1 ನೇ ದರ್ಜೆ ಗುತ್ತಿಗೆದಾರರು	55,90,152/-	14.87 ಹೆಚ್ಚು	14.87 ಹೆಚ್ಚು

ಮೇಲ್ಕಂಡಂತೆ ಅತ್ಯಂತ ಕಡಿಮೆ ದರಗಳನ್ನು ನಮೂದಿಸಿರುವ ಶ್ರೀ ಜಿ.ಎಸ್. ಗುನಗಾ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ದರಗಳಂತೆ ಟೆಂಡರ್ ಮೊತ್ತವು ರೂ. 55,90,152/- ಗಳಾಗಿದ್ದು, ಇದನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಗಣಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 14.87 ರಷ್ಟು ಹೆಚ್ಚಾಗಿರುತ್ತದೆ. ಸದರಿಯವರ ಟೆಂಡೆರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 2-1-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 48,66,354/-ಗಳ ಮೇಲೆ ಶೇಕಡ 14 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 55,47,644/- ಗಳಿಗೆ ಕಾಮಗಾರಿಯನ್ನು ಶ್ರೀ ಜಿ.ಎಸ್. ಗುನಗಾ, ಒಂದನೇ ದರ್ಜೆ ಗುತ್ತಿಗೆದಾರರು, ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡಿರುವ ಮೇರೆಗೆ ಸಮಿತಿಯ ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರು ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ಪ್ರನಿಕಾ 2009, ಬೆಂಗಳೂರು, ದಿನಾಂಕ: 09ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಂಡಬಾಳ ನದಿಗೆ ಚಳ್ಳಕೋಡ (ಮಜರೆ) ಹತ್ತಿರ ಪ್ರವಾಹ ನಿಯಂತ್ರಣ ಕಾಮಗಾರಿಯ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 48,66,354/-ಗಳ ಮೇಲೆ ಶೇಕಡ 14 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 55,47,644/- ಗಳಿಗೆ (ಐವತ್ತೈದು ಲಕ್ಷ ನಲವತ್ತೇಳು ಸಾವಿರದ ಆರು ನೂರ ನಲವತ್ನಾಲ್ಕು ರೂ.ಗಳು ಮಾತ್ರ) ಶ್ರೀ ಜಿ.ಎಸ್. ಗುನಗಾ, ಒಂದನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-1-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1017

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ. ಬೋರೇಗೌಡ, ಎ.ಎಸ್.ಐ., ಚಾಮರಾಜಪೇಟೆ ಸಂಚಾರ, ಬೆಂಗಳೂರು ನಗರ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
(1) ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು ಬೆಂಗಳೂರು ನಗರ ಇವರ ಆದೇಶ ಸಂಖ್ಯೆ : ಡಿಇ(2)/ಆರ್-7/ಸಿಓಪಿ/04/2008 ದಿ : 22-09-08
(2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಅದೇಶ ಸಂಖ್ಯೆ : ಅಪೀಲು (6)/39/2008-09 ಓಬಿ : 47/08-09 ದಿನಾಂಕ : 30-01-09
(3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ : 19-08-09
(4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2) 37/2009-10 ದಿನಾಂಕ : 11-12-2009
(5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 214 ಸಿಎನ್‌ಎಸ್ 09 ದಿನಾಂಕ : 20-03-10

ಪ್ರಸ್ತಾವನೆ :

ಶ್ರೀ ಕೆ. ಬೋರೇಗೌಡ, ಎ.ಎಸ್.ಐ., ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು, ಇವರು ಬನಶಂಕರಿ ಪೊಲೀಸ್ ಠಾಣೆ, ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಶ್ರೀ ಕೆ. ಬೋರೇಗೌಡ, ಎ.ಎಸ್.ಐ., ಬನಶಂಕರಿ ಪೊಲೀಸ್ ಠಾಣೆ, ಬೆಂಗಳೂರು ನಗರ ಆದ ನೀವು ಎಂ.ಎಚ್.ಎ. ನವದೆಹಲಿ, ಇಲ್ಲಿಗೆ ನೀಡಲಾಗಿರುವ ನಿಮ್ಮ ಮನವಿಯಲ್ಲಿ ನಿಮಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಿಂದ ನಗರದ ಸಿಟಿ ಮಾರ್ಕೆಟ್ ಸಂಚಾರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತೀರಿ.

ಈ ಬಗ್ಗೆ ಮೊದಲು ನಿಮ್ಮ ಅಹವಾಲನ್ನು ನಿಮ್ಮ ಹಿರಿಯ ಅಧಿಕಾರಿಗಳಿಗೆ ಸಲ್ಲಿಸದೇ ನೇರವಾಗಿ ಎಂ.ಎಚ್.ಎ. ನವದೆಹಲಿ, ಇಲ್ಲಿಗೆ ಮನವಿಯನ್ನು ನೀಡಿ ಹಿರಿಯ ಅಧಿಕಾರಿಗಳಿಗೆ ಒತ್ತಡವನ್ನು ತಂದಿರುತ್ತೀರಿ. ನೀವು ಶಿಸ್ತು ಇಲಾಖೆಯಲ್ಲಿದ್ದುಕೊಂಡು ಇಲಾಖೆಯ ನಡತೆ ನಿಯಮಗಳನ್ನು ಪಾಲಿಸದೇ ನೀವು ನಿಮ್ಮ ಕರ್ತವ್ಯದಲ್ಲಿ ದುರ್ನಡತೆ ಪ್ರದರ್ಶಿಸಿರುವುದು ಕಂಡು ಬಂದಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 22-09-2008ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ : 30-01-09 ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿರುವುದಿಲ್ಲದಿರುವುದನ್ನು ಗಮನಿಸಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಲು ತೀರ್ಮಾನಿಸಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 150 ಪೊಸಿಅ 2009, ಬೆಂಗಳೂರು, ದಿನಾಂಕ : 06–04–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963 ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ. ಬೋರೇಗೌಡ, ಎ.ಎಸ್.ಐ., ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ಇವರಿಗೆ ಶಿಸ್ತು ಪ್ರಾಧಿಕಾರದ ದಿನಾಂಕ : 22–09–08ರ ಆದೇಶವನ್ನು ಭಾಗಶಃ ಮಾರ್ಪಡಿಸಿ **"ವಾಗ್ದಂಡನೆ"** ಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

1023 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಗೆ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಬಗ್ಗೆ.

ಓದಲಾಗಿದೆ : (1) ಸದಸ್ಯ ಕಾರ್ಯದರ್ಶಿ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಗಳೂರು ಇವರ ಪತ್ರ ಸಂ : PRSC:CR:8/Namination/2009-10, ದಿನಾಂಕ : 10–02–2010.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿನ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಮಂಗಳೂರು ಇವರ ಪತ್ರದಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಗೆ 1) ಡಾ: ಜಯದೇವ ಕೆ. ಸಸ್ಯಶಾಸ್ತ್ರ ವಿಭಾಗ, ಆಳ್ವಾಸ್ ಕಾಲೇಜು, ಮೂಡಬಿದ್ರೆ 2) ಶ್ರೀ ಶ್ರೀನಾಥ ಶೆಟ್ಟಿ, ಅಸಿಸ್ಟೆಂಟ್ ಪ್ರೊಫೆಸರ್, ಎನ್.ಎಮ್.ಎ.ಎಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ, ಉಡುಪಿ. ಇವರನ್ನು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರುಗಳನ್ನಾಗಿ ನಾಮಕರಣ ಮಾಡಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಈ ಪ್ರಸ್ತಾವನೆ ಬಗ್ಗೆ ನಿರ್ದೇಶಕರು (ತಾಂತ್ರಿಕ) ಇವರು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಗೆ ನಾಮ ನಿರ್ದೇಶನ ಮಾಡಬಹುದೆಂದು ಶಿಫಾರಸ್ಸು ಮಾಡಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಿಯಇ 130 ವಿತ್ರಮ 2009, ಬೆಂಗಳೂರು, ದಿನಾಂಕ : 12–04–2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ (ರಿ) ಯ ಆಡಳಿತ ಮಂಡಳಿಯ ಮೆಮೋರೆಂಡಮ್ ಆಫ್ ಅಸೋಸಿಯೇಶನ್, ಅನುಚ್ಛೇದ–5ರ (XVI) (vide Rule No. 5) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು 1) ಡಾ : ಜಯದೇವ ಕೆ. ಸಸ್ಯಶಾಸ್ತ್ರ ವಿಭಾಗ, ಆಳ್ವಾಸ್ ಕಾಲೇಜು, ಮೂಡಬಿದ್ರೆ 2) ಶ್ರೀ ಶ್ರೀನಾಥ ಶೆಟ್ಟಿ, ಅಸಿಸ್ಟೆಂಟ್ ಪ್ರೊಫೆಸರ್, ಎನ್ ಎಮ್.ಎ.ಎಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಟ್ಟೆ, ಉಡುಪಿ. ಇವರನ್ನು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರುಗಳನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಬೋರಲಿಂಗಯ್ಯ),

ಸರ್ಕಾರದ ಅಧೀನ ಕಾರ್ಯದರ್ಶಿ

1024 ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ENERGY SECRETARIAT

Sub : Change of company's name from M/s Magma Leasing Limited to M/s Magma Fincorp Limited-reg.

Read : 1. Government Order No : EN 47 NCE 2007 dated : 15-02-2007

2. Letters No. KRED/08/ML/2010/546 dated : 25-2-2010/1-3-2010 and No : KRED/08/ML/2010/779 dated : 15/17-03-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, approval has been accorded for transfer of 4.95 MW wind power capacity to M/s Magma Leasing Limited from M/s Vestas Wind Technology India Private Limited at Devanakatti village, Belgaum District.

The Registrar of Companies, West Bengal has issued a certificate of incorporation for change of company's name from M/s Magma Leasing limited to M/s Magma Shrachi Finance Limited vide CIN No : L51504WB1978PLC031813 dated : 19-06-2007.

The Registrar of Companies, West Bengal has issued a certificate of incorporation for change of company's name from M/s Magma Shrachi Finance Limited to M/s Magma Fincorp Limited vide CIN No : U51504WB1978PLC031813 dated : 31-07-2008.

In the letter read at (2) above, the Managing Director, Karnataka Renewable Energy Development Limited, Bangalore has sent a proposal to Government for change of company's name from M/s Magma Leasing Limited to M/s Magma Fincorp Limited.

The proposal has been examined in detail and issued the following Order :-

Government Order No. EN 115 NCE 2010, Bangalore, Dated:16 April 2010

Government accords approval for the change of company's name from M/s Magma Leasing Limited to M/s Magma Fincorp Limited.

The Government has reserved the power to Cancel/modify this Order.

The other terms and conditions of the Government Order No : DE 247 NCE 2003 dated : 5-03-2003 shall IPSO FACTO applicable.

By Order and in the name of the Governor of Karnataka,

(S.J. SAMPATH KUMAR)

Under Secretary to Government,

Energy Department

1025

ಕಂದಾಯ ಸಚಿವಾಲಯ

ವಿಷಯ : ಚಿತ್ರದುರ್ಗ ತಾಲ್ಲೂಕು ಕಸಬಾ ಹೋಬಳಿ ಅನ್ನೆಹಾಳ ಗ್ರಾಮದ ಸ.ನಂ. 54ರಲ್ಲಿ 19–00 ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ : ಎಲ್ಎನ್‌ಡಿ/ಸಿಆರ್/100/2008–09 ದಿನಾಂಕ : 07–2–2009.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಅವರ ದಿನಾಂಕ 07–02–2009ರ ಪತ್ರದಲ್ಲಿ, ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ಅನ್ನೆಹಾಳ ಗ್ರಾಮದ, ಸ.ನಂ. 54 ರಲ್ಲಿ 19–00

ಎಕರೆ ಜಮೀನನ್ನು ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು KREDL ಮೂಲಕ ಮೆ. ಸುಜಲಾನ್ ಎನರ್ಜಿ ಲಿಮಿಟೆಡ್ ರವರಿಗೆ ಉಪಗುತ್ತಿಗೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಪರಿಶೀಲಿಸಲಾಗಿ, ಮೆ. ಸುಜಲಾನ್ ಎನರ್ಜಿ ಲಿಮಿಟೆಡ್ ರವರಿಗೆ ಉಪಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನು, ಅನ್ನೆಹಾಳ ಗ್ರಾಮದ. ಸ.ನಂ. 54ರಲ್ಲಿ ಆರ್‌ಟಿಸಿಯ ಕಲಂ 9ರಲ್ಲಿ ಗೋಮಾಳ ಎಂಬುದಾಗಿ ವರ್ಗೀಕೃತಗೊಂಡಿದ್ದು, 452 ಎಕರೆ 0.20 ಗುಂಟೆ ಇರುತ್ತದೆ. ಸದರಿ ಜಮೀನನ್ನು ಲ್ಯಾಂಡ್ ಬ್ಯಾಂಕ್‌ಗೆ ವರ್ಗಾಯಿಸಲಾಗಿದ್ದು ನಂತರ ಸರ್ಕಾರಿ ಸುತ್ತೋಲೆ ಸಂಖ್ಯೆ : ಆರ್‌ಡಿ : 46:ಎಲ್‌ಜಿಪಿ: 2006, ದಿನಾಂಕ: 10–01–2007ರ ರನ್ವಯ ಸದರಿ ಜಮೀನನ್ನು ಲ್ಯಾಂಡ್ ಬ್ಯಾಂಕ್‌ನಿಂದ ವಾಪಸ್ಸು ಪಡೆದು ಗೋಮಾಳ ಎಂಬುದಾಗಿ ನಮೂದಿಸಲಾಗಿದೆ. ಈ ಹಿಂದೆ ಸದರಿ ಸ.ನಂಬರ್‌ನಲ್ಲಿ 12 ಎಕರೆ 05 ಗುಂಟೆ ಜಮೀನನ್ನು 5.8 ಮೆಗಾವ್ಯಾಟ್ ಸಾಮರ್ಥ್ಯದ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದನೆಗಾಗಿ ಮೇ.ಸುಜಲಾನ್ ಎನರ್ಜಿ ಲಿಮಿಟೆಡ್ ಇವರಿಗೆ KREDL ಮುಖಾಂತರ 30 ವರ್ಷಗಳ ಅವಧಿಗೆ ಉಪಗುತ್ತಿಗೆ ನೀಡಲು ಸರ್ಕಾರಿ ಪತ್ರ ಸಂಖ್ಯೆ : ಆರ್.ಡಿ.:21:ಎಲ್‌ಜಿಸಿ:2003 ದಿನಾಂಕ : 11–05–2004ರ ಪತ್ರದಲ್ಲಿ ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಇಂಧನ ಇಲಾಖೆಯವರು ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ : ಇಎನ್:344:ಎನ್‌ಸಿಇ : 2005 ದಿ : 18–11–2005ರ ಆದೇಶದಲ್ಲಿ ಮೇ. ಸುಜಲಾನ್ ಎನರ್ಜಿ ಲಿಮಿಟೆಡ್ ಇವರು 5.8ಮೆಗಾವ್ಯಾಟ್ ಸಾಮರ್ಥ್ಯದಿಂದ 15 ಮೆಗಾ ವ್ಯಾಟ್ ಸಾಮರ್ಥ್ಯದ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸುವುದಕ್ಕೆ ಅನುಮತಿ ನೀಡಿರುತ್ತಾರೆ. ಆದ್ದರಿಂದ ಅನ್ನೆಹಾಳ್ ಗ್ರಾಮದ ಸ.ನಂ.54ರಲ್ಲಿ ಹೆಚ್ಚುವರಿಯಾಗಿ 19–00ಎಕರೆ ಜಮೀನನ್ನು ಮೇ. ಸುಜಲಾನ್ ಎನರ್ಜಿ ಲಿಮಿಟೆಡ್ ಇವರಿಗೆ ಗಾಳಿಯಂತ್ರದಿಂದ ವಿದ್ಯುತ್ ಉತ್ಪಾದಿಸಲು ಜಮೀನು ಗುತ್ತಿಗೆ ಆಧಾರದ ಮೇಲೆ ಮಂಜೂರಾತಿ ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ರವರು ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ವಿಳಾಸಿಸಿ ಬರೆದಿರುವ ದಿನಾಂಕ : 8–9–2008ರ ಪತ್ರದಲ್ಲಿ, ಅನ್ನೆಹಾಳ್ ಗ್ರಾಮದ ಸ.ನಂ. 54ರಲ್ಲಿ ಒಟ್ಟು 452 ಎಕರೆ 20 ಗುಂಟೆ ಗೋಮಾಳ ಜಮೀನಿದ್ದು, ಸದರಿ ಗ್ರಾಮದಲ್ಲಿ 1270 ಜಾನುವಾರುಗಳಿರುತ್ತವೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ರಲ್ಲಿ ನಿಗದಿಪಡಿಸಿರುವ ವಿಸ್ತೀರ್ಣಕ್ಕಿಂತ ಗೋಮಾಳ ಜಮೀನು ಹೆಚ್ಚಿಗೆ ಇರುತ್ತದೆ. ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಜಮೀನಿನಲ್ಲಿ ಯಾವುದೇ ಬೆಲೆ ಬಾಳುವ ಮರ ಗಿಡಗಳು ಇರುವುದಿಲ್ಲ. ಕುರುಚಲು ಗಿಡಗಳಿಂದ ಕಲ್ಲು ಬಂಡೆಗಳಿಂದ ಕೂಡಿರುತ್ತದೆ. ವಿದ್ಯುತ್ ಯಂತ್ರಗಳಿಂದ ಪರಿಸರಕ್ಕಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ತೊಂದರೆ ಇರುವುದಿಲ್ಲ. ಹಾಗೂ ರಾಜ್ಯದಲ್ಲಿ ವಿದ್ಯುತ್ ಕೊರತೆಯ ಹಿನ್ನೆಲೆಯಲ್ಲಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ಪ್ರಸ್ತಾಪಿತ ಜಮೀನನ್ನು ವಾರ್ಷಿಕ ರೂ. 5000/–ಗಳ ಹಾಗೂ ಪೂರಕ ಕರ ವಿಧಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಬೆಂಗಳೂರು ಇವರಿಗೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಬಹುದೆಂದು ಅಭಿಪ್ರಾಯಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು ರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಶವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 18 ಎಲ್‌ಜಿಸಿ 2009, ಬೆಂಗಳೂರು, ದಿನಾಂಕ : 07-04–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ಅನ್ನೆಹಾಳ ಗ್ರಾಮದ, ಸ.ನಂ. 54ರಲ್ಲಿ 452–00 ಎಕರೆ ಗೋಮಾಳ ಜಮೀನಿನ ಪೈಕಿ 19–00 ಎಕರೆ ಹೆಚ್ಚುವರಿ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 97(4)ರಡಿಯಲ್ಲಿನ ಅವಕಾಶದಂತೆ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ, ಮೆ. ಸುಜಲಾನ್ ಎನರ್ಜಿ ಲಿಮಿಟೆಡ್ ರವರಿಗೆ 15 ಮೆಗಾವ್ಯಾಟ್ ಸಾಮರ್ಥ್ಯದ ಗಾಳಿ ಯಂತ್ರದಿಂದ ವಿದ್ಯುತ್ ಉತ್ಪಾದಿಸುವ ಸಲುವಾಗಿ ಸದರಿ ಜಮೀನಿನ ಪ್ರಚಲಿತ ಮಾರುಕಟ್ಟೆ ದರ ಆಧರಿಸಿ ವಾರ್ಷಿಕ ಗುತ್ತಿಗೆ ದರ ನಿಗದಿಪಡಿಸುವ ಷರತ್ತು ವಿಧಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ನಿಯಮ 19(3) (ಬಿ)ರನ್ವಯ 30 ವರ್ಷಗಳ ಗುತ್ತಿಗೆ ಅವಧಿಗೆ ಕೆ.ಆರ್.ಇ.ಡಿ.ಎಲ್ (ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ) ಇವರ ಮೂಲಕ ಮೇ. ಸುಜಲಾನ್ ಎನರ್ಜಿ ಲಿಮಿಟೆಡ್ ರವರಿಗೆ ಉಪಗುತ್ತಿಗೆ ನೀಡಲು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿದೆ. ಗುತ್ತಿಗೆ ದರವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಹೆಚ್ಚಿಸುವ ಷರತ್ತು ವಿಧಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 773 ವೆಚ್ಚ–7/2009 ದಿನಾಂಕ : 7–09–2009ರ ಮತ್ತು ಇಂಧನ ಇಲಾಖೆಯ ಟಿಪ್ಪಣಿ ಸಂಖ್ಯೆ : ಇಎನ್ 527 ಎನ್‌ಸಿಇ 2009 ದಿ : 24–10–2009 ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಜಿ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಮಂಜೂರಾತಿ–3)

1026

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ವಿಜಯಚಂದ್ರ ಮತ್ತು ಶ್ರೀ ಎಂ. ವೆಂಕಟೇಶ್‌ಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ಮೂಕಾಂಬಿಕಾ ದೇವಸ್ಥಾನ, ಕೊಲ್ಲೂರು ಇವರ ಮೇಲಿನ ಆರೋಪಗಳ ಬಗ್ಗೆ ಜಂಟಿ ಇಲಾಖಾ ವಿಚಾರಣೆ–ದಂಡನೆ ವಿಧಿಸುವ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ :

(1) ಸರ್ಕಾರದ ತಿಳುವಳಿಕೆ ಪತ್ರ ಸಂಖ್ಯೆ : ಕಂಇ 120 ಎಂಇಟಿ 95 ದಿ : 29–03–2000

(2) ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಇವರ ಲಿಖಿತ ಹೇಳಿಕೆ ದಿನಾಂಕ : 24–04–2000

(3) ಶ್ರೀ ಎಂ. ವಿಜಯಚಂದ್ರ ಇವರ ಲಿಖಿತ ಹೇಳಿಕೆ ದಿನಾಂಕ : 15–05–2000

(4) ಸರ್ಕಾರದ ಆದೇಶ ಸಂಖ್ಯೆ : ಕಂಇ 120 ಎಂಇಟಿ 95 ದಿನಾಂಕ : 19–03–2001

(5) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ : 31–05–2002

(6) ಶ್ರೀ ಎಂ. ವಿಜಯಚಂದ್ರ ಇವರಿಗೆ ಜಾರಿ ಮಾಡಲಾದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ : ಕಂಇ 120 ಎಂಇಟಿ 95 ದಿನಾಂಕ:19–09–2008

(7) ಶ್ರೀ ಎಂ. ವಿಜಯಚಂದ್ರ ಇವರ ಲಿಖಿತ ಹೇಳಿಕೆ ದಿನಾಂಕ : 10–10–2008

(8) ಸರ್ಕಾರದ ಆದೇಶ ಸಂಖ್ಯೆ : ಕಂಇ 120 ಎಂಇಟಿ 95 ದಿ : 29–07–2009

(9) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 154 ಸಿಎನ್‌ಎಸ್ 2008 ದಿನಾಂಕ : 18–02–2010

ಪ್ರಸ್ತಾವನೆ :

ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದ ಸೇವಾ ವಿಭಾಗದಲ್ಲಿ ರೂ. 4,57,301/–ಗಳು ದುರುಪಯೋಗವಾಗಿರುವುದು ದಿನಾಂಕ : 01–01–93 ರಿಂದ 30–06–95ರವರೆಗಿನ ಲೆಕ್ಕ ಪತ್ರಗಳನ್ನು ವಿಶೇಷ ಲೆಕ್ಕ ಪರಿಶೋಧನಾಧಿಕಾರಿಗಳು ಮಾಡಿದ ಆಡಿಟ್ ವರದಿಯಿಂದ ತಿಳಿದು ಬಂದ ಕಾರಣ ಸದರಿ ಅವಧಿ ದಿನಾಂಕ : 01–01–93 ರಿಂದ 30–06–95ರವರೆಗೆ ಈ ಕೆಳಕಂಡ ಅಧಿಕಾರಿಗಳು ಸದರಿ ದೇವಾಲಯದ ಸೇವಾ ವಿಭಾಗದಲ್ಲಿ ಕಾರ್ಯನಿರ್ವಹಣಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳಿಂದ ಈ ಕೆಳಕಂಡಂತೆ ಹಣ ದುರುಪಯೋಗವಾಗಿರುತ್ತದೆಂದು;

ಕ್ರ. ಸಂ.	ಅಧಿಕಾರಿಗಳ ಹೆಸರು	ದುರುಪಯೋಗವಾಗಿರುವ ಹಣ
1	ಶ್ರೀ ರಾಮಾಜಿ ಹೆಗ್ಡೆ ದಿನಾಂಕ : 01–01–93 ರಿಂದ 30–06–93ರವರೆಗೆ	ರೂ. 93,850/–
2	ಶ್ರೀ ಎಂ. ವಿಜಯಚಂದ್ರ ದಿನಾಂಕ : 01–07–93 ರಿಂದ 27–10–93ರವರೆಗೆ	ರೂ. 5,201/–
3	ಶ್ರೀ ಎಂ.ಎಸ್. ವೆಂಕಟೇಶಮೂರ್ತಿ ದಿನಾಂಕ : 28–10–93 ರಿಂದ 30–06–95ರವರೆಗೆ	ರೂ. 3,58,250/–

ಈ ಮೇಲ್ಕಂಡ 3 ಜನ ಅಧಿಕಾರಿಗಳ ಪೈಕಿ ಶ್ರೀ ರಾಮಾಜಿ ಹೆಗ್ಡೆರವರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಹಾಗೂ ದುರುಪಯೋಗದ ಘಟನೆ ನಡೆದು 4 ವರ್ಷಗಳಿಗೂ ಮೇಲ್ಪಟ್ಟಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ತೊಡಕುಂಟಾಗಿರುವುದರಿಂದ ಸದರಿಯವರಿಂದ ದುರುಪಯೋಗವಾಗಿರುವ ಮೊತ್ತದ ವಸೂಲಿ ಬಗ್ಗೆ ಪ್ರತ್ಯೇಕ ಕ್ರಮ ಕೈಗೊಳ್ಳುತ್ತಿದೆಯೆಂದು, ಶ್ರೀ ಎಂ. ವಿಜಯಚಂದ್ರ ಮತ್ತು ಶ್ರೀ ಎಂ.ಎನ್. ವೆಂಕಟೇಶ್‌ಮೂರ್ತಿ ಇವರುಗಳಿಗೆ ಮೇಲೆ (1) ರಲ್ಲಿ ಓದಲಾದ ತಿಳುವಳಿಕೆ ಪತ್ರದಲ್ಲಿ ದೋಷರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ : 24–04–2000ರ ತಮ್ಮ ಲಿಖಿತ ಹೇಳಿಕೆಯಲ್ಲಿ ಶ್ರೀ ರಾಮ್ ಜಿ ಹೆಗ್ಡೆಯವರು ಶ್ರೀ ವಿಜಯಚಂದ್ರರವರಿಗೆ ದಿನಾಂಕ : 30–06–93 ರಂದು ಪ್ರಭಾರ

ವಹಿಸಿಕೊಡುವಾಗ ದೇವಳಕ್ಕೆ ಜಮಾ ಆಗಲು ರೂ. 1,40,715/-ಗಳು ಬಾಕಿ ಇರುವ ಬಗ್ಗೆ ದಾಖಲಿಸಿರುತ್ತಾರೆ ; ದಿನಾಂಕ : 28-10-93ರಂದು ಶ್ರೀ ವಿಜಯಚಂದ್ರರವರು ತನಗೆ ಪ್ರಭಾರ ವಹಿಸಿಕೊಡುವಾಗ ರೂ. 2,74,408/-ಗಳು ಬಾಕಿ ಇರುವುದನ್ನು ದಾಖಲಿಸಿದ್ದಾರೆ ; ಆದುದರಿಂದ ಒಟ್ಟು ಮೊಬಲಗು ರೂ. 3,58,250/-ಗಳಲ್ಲಿ ರೂ. 2,74,400/- ಗಳು ತನಗೆ ಪ್ರಭಾರ ವಹಿಸಿಕೊಡುವ ಮೊದಲೇ ದುರುಪಯೋಗವಾಗಿರುವುದು ಸ್ಪಷ್ಟವಾಗಿರುತ್ತದೆ ; ಈ ದುರುಪಯೋಗವು ದಿನಾಂಕ : 01-01-93 ರಿಂದಲೇ ಪ್ರಾರಂಭವಾಗಿರುವುದು ಲೆಕ್ಕ ಪರಿಶೋಧನೆಯಿಂದ ತಿಳಿದುಬರುತ್ತದೆ ; ಆದುದರಿಂದ ಸದರಿ ಹಣ ದುರುಪಯೋಗವು ತನ್ನ ಅವಧಿಯಲ್ಲಿ ನಡೆದಿರುವುದಿಲ್ಲವೆಂದು ತಾನು ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಅವಧಿಯಲ್ಲಿ ದುರುಪಯೋಗವಾಗಿರುವ ಬಗ್ಗೆ ಇರುವ ಮೊಬಲಗು ದಿನಾಂಕ : 15-05-95 ರಿಂದ ರಶೀದಿ ನಂ. 295ರಲ್ಲಿ 33,117-00ಗಳನ್ನು ದಿನಾಂಕ : 13-06-95ರಲ್ಲಿ ರಶೀದಿ ನಂ. 334ರಲ್ಲಿ ರೂ. 40,000/-ಗಳನ್ನು ಮತ್ತು ರಶೀದಿ ನಂ. 4535ರಲ್ಲಿ ರೂ. 36,000/- ಗಳನ್ನು ಒಟ್ಟು ರೂ. 1,09,117/-ಗಳನ್ನು ತಾನು ವಸೂಲಿ ಮಾಡಿ ದೇವಾಲಯದ ನಿಧಿಗೆ ಜಮಾ ಮಾಡಿರುತ್ತೇನೆಂದು, ಆದುದರಿಂದ ತನ್ನ ಅವಧಿಯಲ್ಲಿ ಯಾವುದೇ ಹಣ ದುರುಪಯೋಗವಾಗಿಲ್ಲವೆಂದು ತಿಳಿಸಿರುತ್ತಾರೆ.

ಅಲ್ಲದೆ ತಾನು ಪ್ರಭಾರ ವಹಿಸಿಕೊಂಡ ನಂತರ ಹಣ ದುರುಪಯೋಗದ ಬಗ್ಗೆ ಪರಿಶೀಲಿಸಿ, ಸೇವಾ ಕೌಂಟರ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಅಶೋಕ್ ಕುಮಾರ್‌ರವರನ್ನು ಅಮಾನತ್ತುಗೊಳಿಸಿ ವಿಶೇಷ ಲೆಕ್ಕ ಪರಿಶೋಧನೆ ಮಾಡಿಸಿ ವರದಿಯೊಂದಿಗೆ ಸ್ಥಳೀಯ ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್ ದಾಖಲಿಸಿ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ತಿಳಿಸಿ, ಹಣ ದುರುಪಯೋಗವು ತಾನು ಪ್ರಭಾರ ವಹಿಸಿಕೊಳ್ಳುವುದಕ್ಕೆ ಮುಂಚಿತವಾಗಿ ನಡೆದಿರುವುದರಿಂದ ತನ್ನನ್ನು ಆರೋಪದಿಂದ ಮುಕ್ತರನ್ನಾಗಿಸುವಂತೆ ಕೋರಿರುತ್ತಾರೆ.

ಶ್ರೀ ಎಂ. ವಿಜಯಚಂದ್ರ ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ : 15-05-2000ರ ತಮ್ಮ ಲಿಖಿತ ಹೇಳಿಕೆಯಲ್ಲಿ ತಾನು ಯಾವುದೇ ತಪ್ಪನ್ನು ಮಾಡಿಲ್ಲವೆಂದೂ, ಆದಾಗ್ಯೂ ತನ್ನ ಅವಧಿಯಲ್ಲಿ ದುರುಪಯೋಗವಾಗಿರುವ ರೂ. 5,201/-ಗಳನ್ನು ಕಟ್ಟಲು ಸಿದ್ಧನಿದ್ದೇನೆಂದು, ತನ್ನ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಧಿಕಾರಿಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ನೀಡಿರುವ ವರದಿಯ ಹಿನ್ನಲೆಯಲ್ಲಿ ಮತ್ತು ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಇದನ್ನು ಕೂಲಂಕಷವಾಗಿ ವಿಚಾರಣೆ ಮಾಡಲು ಸರ್ಕಾರವು ತೀರ್ಮಾನಿಸಿ ಮೇಲೆ (4)ರಲ್ಲಿ ಓದಲಾದ ದಿನಾಂಕ : 19-03-2001ರ ಆದೇಶದಲ್ಲಿ ಶ್ರೀ ಎಂ.ಜೆ. ಇಂದ್ರಕುಮಾರ್, ನಿವೃತ್ತ ಸೆಷನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಯವರು ವಿವರವಾದ ಇಲಾಖಾ ವಿಚಾರಣೆ ನಡೆಸಿ ಮೇಲೆ (5) ರಂತೆ ದಿನಾಂಕ : 31-05-2002ರಂದು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಆರೋಪಿತ ಅಧಿಕಾರಿಯಾದ ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿಯವರ ಮೇಲೆ ಮಾಡಿರುವ ಆಪಾದನೆಯನ್ನು ಸಾಬೀತುಪಡಿಸುವಲ್ಲಿ ಯಾವ ಸಾಕ್ಷ್ಯಾಧಾರಗಳನ್ನು ಒದಗಿಸದೇ ಇರುವುದರಿಂದ ಇವರ ಮೇಲೆ ಮಾಡಿರುವ ಆಪಾದನೆಯನ್ನು ಸಾಬೀತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು ವಿಫಲಗೊಂಡಿರುವುದರಿಂದ ಅವರ ಮೇಲಿನ ಆರೋಪವು ಸಾಬೀತಾಗಿಲ್ಲವೆಂದು ಮತ್ತು ಶ್ರೀ ಎಂ. ವಿಜಯಚಂದ್ರ ಇವರು ತನ್ನ ಮೇಲೆ ಮಾಡಿರತಕ್ಕ ಆಪಾದನೆಯನ್ನು ತಾವೇ ಒಪ್ಪಿಕೊಂಡಿರುವುದರಿಂದ ಸದರಿಯವರ ವಿರುದ್ಧದ ಆರೋಪವು ಸಾಬೀತಾಗಿರುತ್ತದೆಯೆಂದು ವಿಚಾರಣಾಧಿಕಾರಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಶ್ರೀ ಎಂ. ವಿಜಯಚಂದ್ರ ಇವರ ವಿರುದ್ಧದ ಆರೋಪವು ಸಾಬೀತಾಗಿರುವುದಾಗಿ ವಿಚಾರಣಾಧಿಕಾರಿಗಳು ಅಭಿಪ್ರಾಯಪಟ್ಟಿರುವುದರಿಂದ, ವಿಚಾರಣಾಧಿಕಾರಿಗಳ ವಿಚಾರಣಾ ವರದಿಯನ್ನು ಆಪಾದಿತ ಅಧಿಕಾರಿಗೆ ಮೇಲೆ (6)ರಲ್ಲಿ ಓದಲಾದ 2ನೇ ಕಾರಣ ಕೇಳುವ ನೊಟೀಸಿನೊಂದಿಗೆ ಜಾರಿ ಮಾಡಿ ಈ ಬಗ್ಗೆ ಲಿಖಿತ ಸಮಜಾಯಿಷಿಯನ್ನು ನೀಡುವಂತೆ ಕೋರಲಾಗಿತ್ತು.

ಶ್ರೀ ಎಂ. ವಿಜಯಚಂದ್ರ ಇವರು ಮೇಲೆ (7)ರಲ್ಲಿ ಓದಲಾದ ಪತ್ರದಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ನೀಡುತ್ತಾ ತಾನು ದಿನಾಂಕ : 30-04-2001ರಂದು ಸೇವೆಯಿಂದ ನಿವೃತ್ತಿಗೊಂಡಿದ್ದು, ತನಗೆ ಸರ್ಕಾರದಿಂದ ಬರತಕ್ಕಂತಹ ನಿವೃತ್ತಿ ವೇತನ ಅನುದಾನಗಳು ಕ್ಷಿಪ್ತ ಸಮಯಕ್ಕೆ ಸರಿಯಾಗಿ ದೊರಕದೇ ಇದ್ದ ಕಾರಣ ಕೆಎಟಿ ಅರ್ಜಿ ಸಂಖ್ಯೆ 2255/2005ನ್ನು ಸಲ್ಲಿಸಿದ್ದು, ಕೆಎಟಿಯು ದಿನಾಂಕ : 02-03-2007 ರಂದು ನೀಡಿದ ತೀರ್ಪಿನಂತೆ ಮಹಾಲೇಖಪಾಲರು ದಿನಾಂಕ : 20-07-2007ರಂದು ತಡೆಹಿಡಿದಿರುವ ನಿವೃತ್ತಿ ಉಪದಾನಗಳನ್ನು ಬಿಡುಗಡೆ ಮಾಡಿರುವುದರಿಂದ ಪ್ರಕರಣವು ಈಗಾಗಲೇ ಮುಗಿದಿರುವುದರಿಂದ 2ನೇ ಕಾರಣ ಕೇಳುವ ನೋಟೀಸ್ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ಆಪಾದಿತರುಗಳ ಲಿಖಿತ ಹೇಳಿಕೆ ಮತ್ತು ಸಾಕ್ಷ್ಯಾಧಾರಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿಕೊಂಡು ಶ್ರೀ ಎಂ.ಎಸ್. ವೆಂಕಟೇಶ್‌ಮೂರ್ತಿ ಇವರ ವಿರುದ್ಧದ ಆರೋಪಗಳು ವಿಚಾರಣಾ ವರದಿಯಲ್ಲಿ ಸಾಬೀತಾಗಿಲ್ಲದಿರುವುದರಿಂದ ಮೇಲೆ (8)ರಲ್ಲಿ ಓದಲಾದ ಆದೇಶದಲ್ಲಿ

ಸದರಿಯವರನ್ನು ದೋಷಮುಕ್ತರನ್ನಾಗಿಸಿ ಆದೇಶಿಸಲಾಗಿರುತ್ತದೆ. ಶ್ರೀ ಎಂ. ವಿಜಯಚಂದ್ರ ಇವರ ವಿರುದ್ಧದ ಆರೋಪಗಳು ಸಾಬೀತಾಗಿದ್ದು, ಸದರಿಯವರಿಂದ ದುರುಪಯೋಗವಾಗಿದೆ ಎಂದು ಹೇಳಲಾದ ರೂ. 5,201/–ಗಳನ್ನು ಡಿ.ಡಿ. ಸಂಖ್ಯೆ : 93777 ದಿನಾಂಕ : 12–09–2007 ರಂದು ದೇವಾಲಯದ ನಿಧಿಗೆ ಜಮಾ ಮಾಡಿರುತ್ತಾರೆ. ಉಳಿದಂತೆ ಸದರಿಯವರು ಎಸಗಿರುವ ಕರ್ತವ್ಯ ಲೋಪಕ್ಕಾಗಿ ಅವರ ನಿವೃತ್ತಿ ವೇತನದಿಂದ ರೂ. 100/–ಗಳನ್ನು ಒಂದು ವರ್ಷದ ಅವಧಿಯವರೆಗೆ ತಡೆಹಿಡಿಯುವ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 120 ಎಂಇಟಿ 95, ಬೆಂಗಳೂರು, ದಿನಾಂಕ : 12 ಏಪ್ರಿಲ್ 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಎಂ. ವಿಜಯಚಂದ್ರ, ನಿವೃತ್ತ ಗ್ರೂಪ್ – ಬಿ ಅಧಿಕಾರಿ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಎ) ರನ್ವಯ ಸದರಿಯವರ ನಿವೃತ್ತಿ ವೇತನದಿಂದ ಪ್ರತಿ ತಿಂಗಳು ರೂ. 100/– ರಂತೆ ಒಂದು ವರ್ಷದ ಅವಧಿಗೆ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಮೇಲ್ಕಂಡಂತೆ ದಂಡನೆ ವಿಧಿಸುವ ಪ್ರಸ್ತಾವನೆಗೆ ಕರ್ನಾಟಕ ಲೋಕಸೇವಾ ಆಯೋಗವು ಮೇಲೆ (9)ರಲ್ಲಿ ಓದಲಾದ ಪತ್ರದಲ್ಲಿ ಸಹಮತಿಯನ್ನು ನೀಡಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

1027 ಕಂದಾಯ ಇಲಾಖೆ (ಮುಜರಾಯಿ)

ಕಾರ್ಮಿಕ ಸಚಿವಾಲಯ

ವಿಷಯ: ಗಡಿಭಾಗ ಮತ್ತು ಹೊರರಾಜ್ಯಗಳಲ್ಲಿ ನೆಲೆಸಿರುವ ಕನ್ನಡಿಗರಿಗೆ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳುವ ಅವಕಾಶ ಕಲ್ಪಿಸುವ ಬಗ್ಗೆ ಆದೇಶ

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 123 ಇಟಿಎಕ್ಸ್ 1984 ದಿನಾಂಕ 21/01/1986
2) ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 86 ಇಟಿಎಕ್ಸ್ 1986 ದಿನಾಂಕ 24/04/1986
3) ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆರವರ ಪತ್ರ ಸಂಖ್ಯೆ: ಉತನಿ/ಉದ್ಯೋಗ/ಉನೀಕಾ–05/ವಿವ–29/ 2009–10 ದಿನಾಂಕ: 04/03/2010

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಹಾರಾಷ್ಟ್ರ ರಾಜ್ಯದ ಫಾದಿಂಗ್‌ಲಾಜ್, ಜತ್, ಅಕ್ಕಲ ಕೋಟೆ, ದಕ್ಷಿಣ ಸೊಲ್ಲಾಪುರದ ತಾಲ್ಲೂಕುಗಳು ಹಾಗೂ ಕೇರಳ ರಾಜ್ಯದ ಕಾಸರಗೋಡು ತಾಲ್ಲೂಕಿನಲ್ಲಿ ವಾಸವಿರುವ ಕನ್ನಡಿಗರ ಪೈಕಿ ಯಾರು ಪ್ರಾಥಮಿಕ ಶಾಲೆಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೋ ಅಂತಹವರಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಉದ್ದೇಶಕ್ಕೆ ಕರ್ನಾಟಕ ರಾಜ್ಯದಲ್ಲಿ 15 ವರ್ಷಗಳು ವಾಸವಾಗಿರಬೇಕೆಂಬ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕದ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳ ಗಡಿ ಪ್ರದೇಶದ ತಾಲ್ಲೂಕುಗಳಲ್ಲಿರುವ ಕನ್ನಡಿಗರು ಪ್ರೈಮರಿ ಶಾಲೆಯ ಒಂದನೇ ತರಗತಿಯಿಂದ ಹತ್ತನೆ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಾಗಿದ್ದರೆ ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆಂಬ ನಿಯಮವನ್ನು ಸಡಿಲಗೊಳಿಸಿದ್ದು, ಇಂತಹ ಕನ್ನಡಿಗರು ತಮ್ಮ ವಾಸಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರುಗಳನ್ನು ನೋಂದಾಯಿಸಬಹುದೆಂದು ಸೂಚಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 18/01/2010ರಂದು ನಡೆದ ಸಭೆಯಲ್ಲಿ ಚರ್ಚಿಸಿದಂತೆ ಅಭ್ಯರ್ಥಿಗಳು ದೇಶದ ಯಾವುದೇ ರಾಜ್ಯದಲ್ಲಾಗಲೀ ಪ್ರೈಮರಿ ಶಾಲೆಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರೆ (ಓದಿದವರಾಗಿದ್ದರೆ) ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆಂಬ

ನಿಯಮವನ್ನು ಸಡಿಲಗೊಳಿಸಿ ಅಂತಹ ಕನ್ನಡಿಗರು ತಮ್ಮ ವಾಸ ಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರನ್ನು ನೋಂದಾಯಿಸಲು ಅವಕಾಶ ಕಲ್ಪಿಸುವ ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 58 ಇಟಿಎ 2009, ಬೆಂಗಳೂರು, ದಿನಾಂಕ : 07.04.2010.

ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ ಎಲ್ 86 ಇಟಿಎಕ್ಸ್ 1986 ದಿನಾಂಕ: 24/04/1986 ನ್ನು ಭಾಗಶಃ ಮಾರ್ಪಡಿಸಿ, ದೇಶದ ಯಾವುದೇ ಭಾಗದಲ್ಲಾಗಲಿ, ಪ್ರೈಮರಿ ಶಾಲೆಯ 1ನೇ ತರಗತಿಯಿಂದ 10ನೇ ತರಗತಿಯವರಗೆ (ಪ್ರೌಢಶಾಲೆ) ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿದ್ದರೆ, ಅಂತಹವರಿಗೆ ಕರ್ನಾಟಕದಲ್ಲಿ 15 ವರ್ಷಗಳ ಕಾಲ ವಾಸಿಸಿರಬೇಕೆನ್ನುವ ನಿಯಮವನ್ನು ಸಡಿಲಗೊಳಿಸಿ, ಅಂತಹ ಕನ್ನಡಿಗರು ತಮ್ಮ ವಾಸಸ್ಥಳಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸುವ ಅವಕಾಶ ಕಲ್ಪಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 923

ಎ.ಎಸ್. ವಿಶ್ವೇಶ್ವರಯ್ಯ
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಮೈಸೂರು ಅರಮನೆ ಉಸ್ತುವಾರಿಗಾಗಿ ಮಂಜೂರಾಗಿರುವ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2ಪಿಎಸ್ ಆರ್76, ದಿನಾಂಕ: 28.02.1976,
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 29 ಸೇಅವಿ 2001, ದಿನಾಂಕ: 09.08.2002,
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 24 ಸೇಅವಿ 2008, ದಿನಾಂಕ: 04.04.2008,
4) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 20 ಸೇಅವಿ 2009, ದಿನಾಂಕ: 03.08.2009,
5) ಕಾರ್ಯನಿರ್ವಾಹಕ ಅಧಿಕಾರಿ ಮೈಸೂರು ಅರಮನೆ ಮಂಡಳಿ, ಮೈಸೂರು ಇವರ ಪತ್ರ ಸಂಖ್ಯೆ:ಕಾನಿಅ/ಆಮಂ/ಇಎಸ್‌ಟಿ–1/ತಾತ್ಕಾಲಿಕ/2009–10/376, ದಿನಾಂಕ:21.01.2010.

ಪ್ರಸ್ತಾವನೆ:

ಮೇಲೆ.(1)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಮೈಸೂರು ಅರಮನೆ ಉಸ್ತುವಾರಿಗಾಗಿ ಕೆಲವು ತಾತ್ಕಾಲಿಕ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಮೇಲೆ(2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರೂ.5200–9500ರ ವೇತನ ಶ್ರೇಣಿಯ ಒಂದು ಕಛೇರಿ ಅಧೀಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಈ ಎಲ್ಲಾ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸುತ್ತಾ ಬಂದಿದ್ದು, ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ 113 ವಿವಿಧ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ: 01.04.2009 ರಿಂದ 31.03.2010ರವರೆಗೆ ಮುಂದುವರೆಸಲಾಗಿದೆ. ಮೇಲೆ (5)ರಲ್ಲಿ ಓದಲಾಗಿರುವ ಪತ್ರದಲ್ಲಿ ಕಾರ್ಯನಿರ್ವಹಣಾಧಿಕಾರಿ ಮೈಸೂರು ಅರಮನೆ ಮಂಡಳಿ, ಮೈಸೂರು, ಇವರು ಮೇಲೆ ಉಲ್ಲೇಖಿಸಿರುವ 113 ವಿವಿಧ ಹುದ್ದೆಗಳ ಅವಧಿಯು ದಿನಾಂಕ:31.03.2010ಕ್ಕೆ ಅಂತ್ಯಗೊಳ್ಳುವುದರಿಂದ ಎಲ್ಲಾ ಹುದ್ದೆಗಳನ್ನು ದಿನಾಂಕ:01.04.2010ರಿಂದ 31.03.2011ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು 2010–11ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2205–00–107–0–04 ಯೋಜನೇತರರಡಿ ಮೈಸೂರು ಅರಮನೆ ನಿರ್ವಹಣೆಗೆ ಒಟ್ಟು 113 ಹುದ್ದೆಗಳು ಅಪೆಂಡಿಕ್ಸ್–ಬಿ ಸಲ್ಲಿಸಿರುವುದರಿಂದ 113 ಹುದ್ದೆಗಳನ್ನು ಮುಂದುವರೆಸಲು ನಿರ್ಣಯಿಸಿದೆ. ಅದರಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 32 ಸೇಅವಿ 2010 ಬೆಂಗಳೂರು, ದಿನಾಂಕ 07–04–2010.

ಮೈಸೂರು ಅರಮನೆ ಮಂಡಳಿ, ಮೈಸೂರು ಇಲ್ಲಿ ಅರಮನೆ ಉಸ್ತುವಾರಿಗಾಗಿ ಸೃಜಿಸಲಾಗಿರುವ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ–1ರಿಂದ 9 ರವರೆಗೆ ನಮೂದಿಸಿರುವ 113 ವಿವಿಧ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ:01.04.2010 ರಿಂದ 31.03.2011 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2205-ಕಲೆ ಮತ್ತು ಸಂಸ್ಕೃತಿ 107-ಸಂಗ್ರಹಾಲಯ-04 ಮೈಸೂರು ಅರಮನೆ ಉಸ್ತುವಾರಿ ವೇತನ(ಯೋಜನೇತರ) ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಅನಧಿಕೃತ ಟಿಪ್ಪಣಿಸಂಖ್ಯೆ ಆಇ 164 ವೆಚ್ಚ 12/10, ದಿನಾಂಕ:12.03.2010ರಲ್ಲಿ ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿದ ನಂತರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ1996 ದಿನಾಂಕ: 10.07.1996ರಲ್ಲಿ ಇಲಾಖೆಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 32 ಸೇಅವಿ 2010, ದಿನಾಂಕ: 07-04-2010

ಅನುಬಂಧ-1

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಸಹಾಯಕ ಇಂಜಿನಿಯರ್ (ಸಿವಿಲ್)	02
2)	ಪ್ರಥಮ ದರ್ಜೆ ಅಕೌಂಟ್ಸ್ ಸಹಾಯಕ	01
3)	ಪ್ರಥಮ ದರ್ಜೆ ಪಿಡಬ್ಲ್ಯೂಡಿ ಸಹಾಯಕರು	01
4)	ಪ್ರಥಮ ದರ್ಜೆ ಸ್ಟೋರ್ ಕೀಪರ್	01
5)	ಎರಡನೇ ದರ್ಜೆ ಸ್ಟೋರ್ ಕೀಪರ್	01
6)	ಎರಡನೇ ದರ್ಜೆ ಪಿಡಬ್ಲ್ಯೂಡಿ ಸಹಾಯಕರು	02
7)	ಬೆರಳಚ್ಚುಗಾರ	01
8)	ಅಟೆಂಡರ್	03
9)	ಸಹಾಯಕ ತೋಟಗಾರಿಕೆ ಅಧಿಕಾರಿ (ಗ್ರೇಡ್-II)	01
10)	ತೋಟಗಾರಿಕಾ ಸಹಾಯಕ (ದರ್ಜೆ-III)	02
11)	ವಾಚ್‌ಮನ್	01
12)	ಸ್ವೀಪರ್	23
13)	ಮಾಲಿ	29
14)	ಪ್ಯೂನ್‌ಗಳು	02
15)	ಪ್ಲಂಬರ್	01

ಅನುಬಂಧ-2

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ (ಎಲೆಕ್ಟ್ರಿಕಲ್)	01
2)	ಸಹಾಯಕ ಇಂಜಿನೀಯರ್	02
3)	ಮೊದಲನೇ ದರ್ಜೆ ಸ್ಟೋರ್ ಕೀಪರ್	01
4)	ಮೊದಲನೇ ದರ್ಜೆ ಪಿಡಬ್ಲ್ಯೂಡಿ ಸಹಾಯಕ	01
5)	ಮೊದಲನೇ ದರ್ಜೆ ವೈರ್‌ಮನ್/ಮೆಕಾನಿಕ್	02
6)	ಎರಡನೇ ದರ್ಜೆ ವೈರ್‌ಮನ್/ ಮೆಕಾನಿಕ್	07
7)	ಮೆಕಾನಿಕ್ ಕಂ ಅಟೆಂಡರ್	02
8)	ಲೈನ್‌ಮನ್	08
9)	ಪ್ಯೂನ್	01
10)	ವಾಚ್‌ಮನ್	02

ಅನುಬಂಧ-3

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಎರಡನೇ ದರ್ಜೆ ಸಹಾಯಕ	01

ಅನುಬಂಧ-4

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	"ಡಿ" ಗ್ರೂಪ್ ಹುದ್ದೆಗಳು	04
2)	ಮೊದಲನೇ ದರ್ಜೆ ಸಹಾಯಕ	01

ಅನುಬಂಧ-5

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಗ್ರೆಡ್ ಲೆಕ್ಚರರ್	03
2)	ಲೆಕ್ಕ ಅಧೀಕ್ಷಕ	01

ಅನುಬಂಧ-6

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಕ್ಯೂರೇಟರ್ (ಮೈಸೂರು ಅರಮನೆ)	01

ಅನುಬಂಧ-7

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಜಾಡ ಮಾಲಿ	01

ಅನುಬಂಧ-8

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಎರಡನೇ ದರ್ಜೆ ಸಹಾಯಕ	01
2)	ಅಟೆಂಡರ್	01

ಅನುಬಂಧ-9

ಕ್ರಮ ಸಂಖ್ಯೆ	ಪದನಾಮ	ಹುದ್ದೆಗಳ ಸಂಖ್ಯೆ
1)	ಕಛೇರಿ ಅಧೀಕ್ಷಕ	01
	ಒಟ್ಟು:	**113**

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

ಪಿ.ಆರ್. 924

PERSONNEL AND ADMINISTRATIVE REFORMS SECRETARIAT

Subject: Terms and conditions of Deputation of Sri.N Ramesh, Senior Divisional Operations Manager, Bangalore Division, South Western Railways on Deputation as joint Secretary to Government, Department of Infrastructure Development, Karnataka Government Secretariat.

Read: Notification No. DPAR 874 SGO 2008 dated: 07-03-2009.

PREAMBLE:

In Notification dated 07.03.2009 read above, Sri. N. Ramesh, Senior Divisional Operations Manager, Bangalore Division, South Western railways was appointed on Deputation as joint Secretary to Government, Department of Infrastructure Development, Karnataka Government Secretariat, with effect from 15-01-2009.

The terms and conditions of Deputation of Sri. N. Ramesh, Senior Devisional Operations Manager, Bangalore Division, South Western Railways, on Deputation as Joint Secretary to Government, Department of Infrastructure Development, Karnataka Government Secretariat, has been examined and hence the following order.

GOVERNMENT ORDER NO. DPAR 874 SGO 2008, BANGALORE, DATED: 06TH APRIL 2010.

5. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ : ವಿಚಾರಣೆ/ಸಿಆರ್-41/2009-10 ದಿನಾಂಕ : 18-03-2010.

ಪ್ರಸ್ತಾವನೆ :

ಕರ್ನಾಟಕ ಕಾರಾಗೃಹಗಳ ಇಲಾಖೆಯ ಅಧಿಕಾರಿಯಾದ ಶ್ರೀ ಶಿವಣ್ಣರವರು ಶಿವಮೊಗ್ಗ ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ದಿನಾಂಕ : 17-11-2009ರಂದು ಸಂಜೆ ಸುಮಾರು 17.30ರ ಸಮಯದಲ್ಲಿ ಅಕ್ರಮವಾಗಿ ಸಂಭಾವನೆ (bribe) ಪಡೆಯುತ್ತಿದ್ದಾಗ ಲೋಕಾಯುಕ್ತರ ಬಲೆಗೆ ಸಿಲುಕಿ, ಲೋಕಾಯುಕ್ತ ಪೊಲೀಸರು ಅವರನ್ನು ಕ್ರೈಂ ಸಂಖ್ಯೆ : 13/09ರ ಲಂಚ ಪ್ರತಿಬಂಧಕ ಕಾಯ್ದೆ 1988ರ ಅಡಿಯಲ್ಲಿ ದಸ್ತಗಿರಿ ಮಾಡಿ, ಗೌ॥ ವಿಶೇಷ ಹಾಗೂ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ. ಲಂಚ ಪ್ರತಿ ಬಂಧಕ ಕಾಯ್ದೆಯ ಅಡಿಯಲ್ಲಿ ಸದರಿ ಆಪಾದಿತ ಅಧಿಕಾರಿಯ ಮೇಲೆ ಅಧಿಪತ್ರ ಜಾರಿಯಾಗಿ ನ್ಯಾಯಾಂಗ ಬಂಧನಕ್ಕೆ ನೀಡಿರುತ್ತಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರು ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಇವರ ವಿರುದ್ಧ ಮುಂದೆ ಜರುಗತಕ್ಕ ಕ್ರಿಮಿನಲ್ ಮೊಕದ್ದಮೆಯ ವಿಚಾರಣೆಯನ್ನು ಕಾಯ್ದಿರಿಸಿ, 1957ರ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10(8)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಬಳಸಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಇವರನ್ನು ದಸ್ತಗಿರಿ ಮಾಡಿದ ದಿನಾಂಕ : 17-11-2009ರಿಂದಲೇ ಪೂರ್ವಾನ್ವಯವಾಗುವಂತೆ ನಿಲಂಬನದಲ್ಲಿರಿಸಿ ಆದೇಶಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರು, ಮುಂದೆ ನಡೆಯುವ ತನಿಖೆಯಲ್ಲಿ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಇವರು ಹಸ್ತಕ್ಷೇಪ ಮಾಡುವ ಅಥವಾ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ, ಸದರಿಯವರ ಹುದ್ದೆಯ ಹಕ್ಕನ್ನು ತಕ್ಷಣದಿಂದ ಜಾರಿಗೆ ಬರುವಂತೆ ಶಿವಮೊಗ್ಗ ಜಿಲ್ಲಾ ಕಾರಾಗೃಹದಿಂದ ಚಿತ್ರದುರ್ಗ ಜಿಲ್ಲಾ ಕಾರಾಗೃಹಕ್ಕೆ ವರ್ಗಾಯಿಸಿ ಆದೇಶಿಸಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಬರೆದ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಪ್ರಸ್ತಾಪಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ತೆಗೆದುಕೊಂಡ ಕ್ರಮದ ವಿವರಗಳನ್ನು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕ (ನಿಲಂಬನದಲ್ಲಿ) ಇವರ ಅಮಾನತ್ತಿನ ವಿಚಾರಣೆಯನ್ನು ಕಾಯ್ದಿರಿಸಿ, ಸದರಿಯವರ ಅಮಾನತ್ತನ್ನು ರದ್ದುಪಡಿಸಿ ಕರ್ತವ್ಯಕ್ಕೆ ತೆಗೆದುಕೊಳ್ಳಬೇಕೆಂಬ ಕೋರಿಕೆ ಸರ್ಕಾರಕ್ಕೆ ಬಂದ ಹಿನ್ನೆಲೆಯಲ್ಲಿ, ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರಿಗೆ ಬರೆದ ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕ (ನಿಲಂಬನದಲ್ಲಿ) ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಕರ್ತವ್ಯಕ್ಕೆ ತೆಗೆದುಕೊಳ್ಳುವ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಲಾಗಿತ್ತು.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರು ಸರ್ಕಾರಕ್ಕೆ ಬರೆದ ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು (ನಿಲಂಬನದಲ್ಲಿ), ಇವರ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ಕಾಯ್ದಿರಿಸಿ ನಿಲಂಬನವನ್ನು ರದ್ದುಗೊಳಿಸಬಹುದೆಂದೂ, ಶಿವಮೊಗ್ಗ ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರ ಹುದ್ದೆ ಖಾಲಿ ಇರುವುದಿಲ್ಲವಾದ್ದರಿಂದ ಹಾಗೂ ಸದರಿ ಅಧಿಕಾರಿಯವರನ್ನು ಮರಳಿ ಕರ್ತವ್ಯಕ್ಕೆ

ನೇಮಿಸಿ, ಶಿಸ್ತಿನ ಕಾರಣಗಳಿಗಾಗಿ ಈ ಕೆಳಕಂಡ ಜಿಲ್ಲಾ ಕಾರಾಗೃಹಗಳ ಪೈಕಿ ಒಂದು ಸಹಾಯಕ ಅಧೀಕ್ಷಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಬಹುದಾಗಿದೆ ಎಂದು ತಿಳಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ :–

1. ಚಾಮರಾಜನಗರ ಜಿಲ್ಲಾ ಕಾರಾಗೃಹ
2. ಮಡಿಕೇರಿ ಜಿಲ್ಲಾ ಕಾರಾಗೃಹ
3. ತುಮಕೂರು ಜಿಲ್ಲಾ ಕಾರಾಗೃಹ (ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀಮತಿ ಆರ್. ಲತಾ, ಸಹಾಯಕ ಅಧೀಕ್ಷಕರು, ಇವರನ್ನು ಚಾಮರಾಜನಗರ ಜಿಲ್ಲಾ ಕಾರಾಗೃಹಕ್ಕೆ ವರ್ಗಾಯಿಸಿ ಆ ಸ್ಥಳದಲ್ಲಿ)

ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು (ನಿಲಂಬನದಲ್ಲಿ) ಇವರು ಈಗ ಜಾಮೀನಿನ ಮೇಲೆ ನ್ಯಾಯಾಂಗ ಬಂಧನದಿಂದ ಬಿಡುಗಡೆಯಾಗಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 25 ಪಿಆರ್‌ಇ 2010, ಬೆಂಗಳೂರು, ದಿನಾಂಕ : 19–04–2010

ಅಮಾನತ್ತಿನಲ್ಲಿರುವ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಕರ್ನಾಟಕ ಕಾರಾಗೃಹಗಳ ಇಲಾಖೆ, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(5)(ಸಿ)ರಲ್ಲಿ ಸರ್ಕಾರಕ್ಕೆ ಇರುವ ಅಧಿಕಾರವನ್ನು ಚಲಾಯಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಚಾಮರಾಜನಗರ ಜಿಲ್ಲಾ ಕಾರಾಗೃಹದಲ್ಲಿ ಖಾಲಿ ಇರುವ ಸಹಾಯಕ ಅಧೀಕ್ಷಕ ಹುದ್ದೆಗೆ ನೇಮಿಸಲಾಗಿದೆ :–

1. ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರವರ ವಿರುದ್ಧ ಇರುವ ಕ್ರಿಮಿನಲ್ ಮೊಕದ್ದಮೆಯಲ್ಲಿ ಮುಂದೆ ಜರುಗತಕ್ಕ ವಿಚಾರಣೆಯನ್ನು ಕಾಯ್ದಿರಿಸಿದೆ.
2. ಸದರಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಗೌ॥ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ಧವಾಗತಕ್ಕದ್ದು.
3. ತತ್ಸಂಬಂಧದಲ್ಲಿ, ಮುಂದೆ ಸರ್ಕಾರವು ನೀಡುವ ಯಾವುದೇ ಆದೇಶಕ್ಕೆ ಬದ್ಧವಾಗತಕ್ಕದ್ದು.
4. ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಇವರಿಂದ ಮೇಲಿನ ಷರತ್ತುಗಳಿಗೆ ಒಪ್ಪಿದ ಬಗ್ಗೆ, ಒಪ್ಪಿಗೆ ಪತ್ರ ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1051

ಟಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಆರ್ಥಿಕ ಸಚಿವಾಲಯ

ವಿಷಯ : ನಿವೃತ್ತಿ ವೇತನದಾರರಿಗೆ ಮತ್ತು ಕುಟುಂಬ ನಿವೃತ್ತಿ ವೇತನದಾರರಿಗೆ ತುಟ್ಟಿಭತ್ಯೆ ದರಗಳ ಪರಿಷ್ಕರಣೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಆಇ (ವಿಶೇಷ) 6 ಸಿಪಿಪಿ 2009, ದಿನಾಂಕ : 25–11–2009.

ಆದೇಶ ಸಂಖ್ಯೆ : ಆಇ (ವಿಶೇಷ) 04 ಸಿಪಿಪಿ 2010, ಬೆಂಗಳೂರು, ದಿನಾಂಕ : 12ನೇ ಏಪ್ರಿಲ್ 2010

ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರವನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಶೇಕಡ 38 ರಿಂದ ಶೇಕಡ 46ಕ್ಕೆ ಹೆಚ್ಚಿಸಿ ದಿನಾಂಕ 1ನೇ ಜನವರಿ 2010 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಯುಜಿಸಿ/ಎಐಸಿಟಿಇ ಮತ್ತು ಐಸಿಎಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿದ್ದು ದಿನಾಂಕ 1.7.2005 ರಂದು ಅಥವಾ ತದ ನಂತರ ನಿವೃತ್ತರಾದ ಪಿಂಚಣಿದಾರರಿಗೆ ಈ ಆದೇಶವು ಅನ್ವಯಿಸತಕ್ಕದ್ದಲ್ಲ ಇಂತಹ ಪಿಂಚಣಿದಾರರು ಕುರಿತಂತೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

3. ಈ ಆದೇಶದಿಂದಾಗಿ ಪಾವತಿಸಬೇಕಾದ ತುಟ್ಟಿಭತ್ಯೆಯ ಮೊತ್ತದಲ್ಲಿ ಐವತ್ತು ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಶಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು ಮತ್ತು ಐವತ್ತು ಪೈಸೆಗಿಂತ ಕಡಿಮೆ ಇರುವ ಭಿನ್ನಾಂಶಗಳನ್ನು ಕಡೆಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1052

ಯು.ಪಿ. ಪ್ರಭು

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಉದ್ಯಾನದ ಸ್ಥಳಾವಕಾಶಕ್ಕಾಗಿ ವಿಶೇಷ ರಿಯಾಯಿತಿ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 49 ಅಡವಿ 2006, ದಿನಾಂಕ :16–05–2006
2. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 04 ಅಡವಿ 2007, ದಿನಾಂಕ :19–10–2007
3. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 64 ಅಡವಿ 2008, ದಿನಾಂಕ : 2–01–2009
4. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 64 ಅಡವಿ 2008, ದಿನಾಂಕ :12–06–2009
5. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಪತ್ರ ಸಂ : ಮಾತಂನಿ/ಲೆಕ್ಕ–1/ಐಟಿಪಾರ್ಕ್ ಹುಬ್ಬಳ್ಳಿ/06/865/07–08, ದಿನಾಂಕ : 25–02–2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 16–5–06ರ ಸರ್ಕಾರಿ ಆದೇಶದಲ್ಲಿ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಉದ್ಯಾನಕ್ಕೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಸೇವೆಗಳು ಹಾಗೂ ಹೊರಗುತ್ತಿಗೆಗಳ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುವ ಸಲುವಾಗಿ ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಉದ್ಯಾನದಲ್ಲಿ ಹೂಡಿಕೆದಾರರು ಸ್ಥಳಾವಕಾಶ ಮಾಡಲು ಈ ಕೆಳಕಂಡ ವಿಶೇಷ ರಿಯಾಯಿತಿ ನೀಡಲಾಗಿತ್ತು.

ಅ) ಪ್ರತಿ ಚ.ಅಡಿಗೆ ರೂ. 10/–ಗಳಂತೆ ವೈಯಕ್ತಿಕವಾಗಿ ಕನಿಷ್ಠ 10,000 ಚ.ಅಡಿಗಳಂತೆ ಮೊದಲನೇ 50,000 ಚ.ಅಡಿಗಳಿಗೆ.

ಆ) ಸದರಿ 50,000 ಚ.ಅಡಿ ನಂತರ 15,000 ಚ.ಅಡಿಗಳಿಗೆ ಪ್ರತಿ ಚ.ಅಡಿಗೆ ರೂ. 15/–ದರದಲ್ಲಿ (ಮೊದಲ 50,000 ಚ.ಅಡಿಗಳು ಮುಗಿದ ನಂತರ).

ಇ) ಉಳಿದ ಜಾಗಕ್ಕೆ ರೂ. 30/–ಗಳಂತೆ (ಅಂದರೆ 65,000 ಚ.ಅಡಿ ಅಂದರೆ 50,000 ಚ.ಅಡಿ ಮತ್ತು 15,000 ಚ.ಅಡಿ ಮುಗಿದ ನಂತರ) ಈ ಕೆಳಕಾಣಿಸಿದ ಷರತ್ತಿಗೊಳಪಟ್ಟು ವಿಶೇಷ ರಿಯಾಯಿತಿಗಳನ್ನು ನೀಡಲಾಗಿತ್ತು.

1) ಉಲ್ಲೇಖಿಸಿದ ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ 6 ತಿಂಗಳ ಕಾಲಾವಧಿಗೆ ಸದರಿ ರಿಯಾಯಿತಿ ಅನ್ವಯಿಸುವಂತೆ

2) ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಈ ಸಂಸ್ಥೆಯಲ್ಲಿ ನೋಂದಾಯಿಸಿದ ಮಾಹಿತಿ ತಂತ್ರಜ್ಞಾನ ಕಂಪನಿಗಳು/ಫರ್ಮ್‌ಗಳಿಗೆ ಮಾತ್ರ ಸ್ಥಳಾವಕಾಶ ನೀಡಲು,

3) ವಿಶೇಷ ರಿಯಾಯಿತಿಯಡಿಯಲ್ಲಿನ ಬಾಡಿಗೆ ಕರಾರು 3 ವರ್ಷಗಳಿಗೆ ಮಾತ್ರ ಹಾಗೂ ತದನಂತರ ಬಾಡಿಗೆ ಪರಿಷ್ಕರಿಸಲು

ಮೇಲೆ (2)ರಲ್ಲಿ ಓದಲಾದ ದಿನಾಂಕ 19–10–2007ರ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕಂಪನಿಗಳನ್ನು ಉತ್ತೇಜಿಸುವ ಸಲುವಾಗಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಲಾಗಿತ್ತು.

ಅ) ಪ್ರಸ್ತುತ ಇರುವ ಪ್ರತಿ ಚದರ ಅಡಿಗೆ ರೂ. 10/–ಗಳ ಬಾಡಿಗೆಯನ್ನು ರೂ. 9/–ಗಳಿಗೆ ಇಳಿಸಲು ;

ಆ) ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಉದ್ಯಾನದ ಸ್ಥಳಾವಕಾಶಕ್ಕಾಗಿ ಬಾಡಿಗೆ ದರದಲ್ಲಿ ವಿಶೇಷ ರಿಯಾಯಿತಿಯಡಿ ಆಯ್ಕೆ ಮಾಡಿಕೊಳ್ಳುವವರಿಗೆ ಕನಿಷ್ಠ ಸ್ಥಳಾವಕಾಶವನ್ನು 10,000 ಚದರ ಅಡಿಗಳಿಂದ 2500 ಚ.ಅಡಿಗಳಿಗೆ ಇಳಿಸಲು ; ಹಾಗೂ

ಇ) 2500 ಚ.ಅಡಿಗಳಿಗಿಂತಲೂ ಕಡಿಮೆ ಸ್ಥಳಾವಕಾಶವನ್ನು ಆಯ್ಕೆ ಮಾಡಿಕೊಳ್ಳುವವರಿಗೆ ಪ್ರಸ್ತುತ ಜಾರಿಯಲ್ಲಿರುವ ಬಾಡಿಗೆ ದರವನ್ನೇ ಮುಂದುವರೆಸಲು

ಸದರಿ ಆದೇಶದಲ್ಲಿನ ರಿಯಾಯಿತಿಯನ್ನು ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ವರೆಗೆ ವಿಸ್ತರಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ 2-1-09ರ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕಂಪನಿಗಳನ್ನು ಉತ್ತೇಜಿಸುವ ಸಲುವಾಗಿ ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಿಯಾಯಿತಿ ದರದಲ್ಲಿ ನಿಗದಿಪಡಿಸಿರುವ ಬಾಡಿಗೆ ದರ ರೂ. 9/- (ಪ್ರತಿ ಚದರ ಅಡಿ)ನ್ನು ದಿನಾಂಕ 18-10-2008 ರಿಂದ 31-3-2009ರವರೆಗೆ ವಿಸ್ತರಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (4)ರಲ್ಲಿ ಓದಲಾದ ದಿನಾಂಕ 12-06-09ರಲ್ಲಿ ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಪಾರ್ಕ್‌ನಲ್ಲಿನ ಜಾಗವನ್ನು ಚದರ ಅಡಿ ಒಂದಕ್ಕೆ ರೂ. 9/- ರಂತೆ ಗುತ್ತಿಗೆ ನೀಡುವ ರಿಯಾಯಿತಿ ಅವಧಿಯನ್ನು ದಿನಾಂಕ 1-4-2009 ರಿಂದ 31-3-2010ರವರೆಗೆ ವಿಸ್ತರಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರ ದಿನಾಂಕ 25-02-2010ರಲ್ಲಿ ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಪಾರ್ಕ್‌ನಲ್ಲಿನ ಜಾಗವನ್ನು ಚದರ ಅಡಿ ಒಂದಕ್ಕೆ ರೂ. 9/- ರಂತೆ ಗುತ್ತಿಗೆ ನೀಡುವ ರಿಯಾಯಿತಿ ಅವಧಿಯನ್ನು ದಿನಾಂಕ 01-04-2010 ರಿಂದ 31-3-2011ರವರೆಗೆ ವಿಸ್ತರಿಸಲು ಪ್ರಸ್ತಾವಿಸಲಾಗಿದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮಾತಂಇ 25 ಅಡವಿ 2010, ಬೆಂಗಳೂರು, ದಿನಾಂಕ : 20-04-2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಪಾರ್ಕ್‌ನಲ್ಲಿನ ಜಾಗವನ್ನು ಚದರ ಅಡಿ ಒಂದಕ್ಕೆ ರೂ. 9/- ರಂತೆ ಗುತ್ತಿಗೆ ನೀಡಲು ನಿಗದಿಪಡಿಸಿರುವ ಅವಧಿಯನ್ನು ದಿನಾಂಕ 01-04-2010 ರಿಂದ 31-3-2011ರವರೆಗೆ ವಿಸ್ತರಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 100 ವೆಚ್ಚ-2/2010, ದಿನಾಂಕ 31-03-2010ರ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1054

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

INFRASTRUCTURE DEVELOPMENT SECRETARIAT

Sub : Entrustment of the Biodiversity Study on Environmental Impact and Mitigative Measures of the Proposed Hubli-Ankola Railway Line – Release of funds.

Read : 1. Meeting held on 29-12-2009 under the Chairmanship of the Chief Secretary to Government of Karnataka.

2. Letter dated 17-2-2010 from the Principal Secretary to Government, IDD

3. Letter dated 13-04-2010 from Prof. R. Sukumar, Chairman, Centre for Ecological Sciences, Indian Institute of Science, Bangalore

Preamble :-

The Hubli-Ankola Railway line (HA R1) is 167 km (average 80%) passing through Western Ghat forest area in Uttar Kannada District connecting the Hinter land of Karnataka to Ankola and ports. This project was sanctioned in 1997-98 and 42 kms length of track has been completed between Hubli-

Kalaghatagi. Further construction of Railway line could not proceed for want of Forest and Environment clearances.

2. The proposed Railway line is very vital and important due to the requirement of goods logistics support to commercial, industrial and mineral zones of Northern Karnataka. The mineral rich areas of Bellary, Koppal, Bagalkot, Gulbarga districts have to be connected to the posts in the costal areas of D.K. and U.K. districts. The proposed project will connect Tadri and Karwar ports a major portion of the corridor passes through thickly vegetated Western Ghat. In view of this the forest clearance under Forest Conservation Act is a deciding factor to make the proposed Railway line a reality. The Railway projects are exempted under EIA notification 1994 and hence only Forest clearance under Forest Conservation Act 1980 is the only requisit for Hubli – Ankola Railway project.

3. To seek Forest clearance under Forest Conservation Act, 1980 Government intends to have full knowledge of the existing biodiversity (both flora & fauna) and the impacts that could happen due to the proposed project an understanding would help GOK to undertake measures that would minimise the environmental damages through number of good engineering practices and environmental mitigation measures.

4. In the meeting held on 29-12-2009 under Chairmanship of the Chief Secretary to Government read at (1) above, the matter was discussed and decided that IDD shall initiate steps to get the approval of the Cabinet for undertaking the project and get sanctions for compensatory afforestation and the measures required to reduce any environmental damage because of the project.

5. In the letter read at (2) above, Infrastructure Development Department has requested to the Chairman, Indian Institute of Science, Bangalore to take up the Biodiversity study on Environmental impact and mitigative measures of the proposed Hubli-Ankola railway line.

6. In this letter read at (3) above, The Chairman, IISc has stated that to understand the scope of the work involved as per terms of reference, it is necessary to carry out a preliminary field survey. This survey is required to understand the manpower requirement, duration and cost of the study and has requested to release an amount of Rs. 1.00 lakhs in favour of Registrar, IISc so that a small team from IISc can make a visit at the earliest to the field site and make a preliminary assessment.

Government have considered the above proposal. Hence the following order.

Government Order No. IDD 25 NSW 2008, Bangalore, Dated : 20-04-2010

In the circumstances explained in the preamble and after examining the proposal of Chairman, IISc, sanction is hereby accorded for the release of Rs. 1.00 lakhs (Rupees One lakh) only to the Biodiversity Study on Environmental Impact and Mitigative Measures of the proposed Hubli-Ankola Railway Line.

2. This expenditure shall be met under the Head of Account “3451-00-090-1-06-059 Preliminary studies other expenditure out of the Budget provided for 2010-11.

3. The Chief Executive Officer, K-RIDE is authorized to draw the amount on a payee’s receipt duly countersigned by the Under Secretary to Government, Infrastructure Development Department and K-RIDE shall in turn deposit the same with the “Registrar, Indian Institute of Science”, Bangalore.

4. This Order issued in accordance with the financial powers delegated to Principal Secretaries/Secretaries vide G.O. No. FD 1 TFP 2008 dated 16-5-2008.

By Order and in the name of the Governor of Karnataka

N. Manjula Geetha

Under Secretary to Government

Infrastructure Development Department

PR NO. 1055

FOREST, ECOLOGY AND ENVIRONMENT SECRETARIAT

Sub : Diversion of 0.081 ha. of forest land in Malavalli Taluk, Mandya District for construction of water supply scheme to Netkal and other 4 villages under Rajiv Gandhi National Drinking Water Scheme in favour of the Assistant Executive Engineer, Panchayat Raj Engineering Sub-Division, Malavalli.

Read :

1. Letter No. A5(7)GFI CR.65/08-09 dated : 09-04-2009 of the Principal Chief Conservator of Forests, Bangalore.
2. State Government Letter No. FEE 87 FLL 2009, dated : 11-06-2009.
3. Letter No. 4-KRB617/2009-BAN/5262, dated : 05-08-2009 of Government of India, Ministry of Environment and Forests, Regional Office, South Zone, Bangalore.
4. Letter No. A5(7)GFI CR.65/08-09 dated : 23-11-2009 of the Principal Chief Conservator of Forests, Bangalore.
5. State Government Letter No. FEE 87 FLL 2009, dated : 06-01-2010.
6. Letter No. 4-KRB617/2009-BAN/6428, dated : 28-01-2010 of Government of India, Ministry of Environment and Forests, Regional Office, South Zone, Bangalore.

Preamble :-

The Principal Chief Conservator of Forests, Bangalore vide his letter dated : 11-06-2009 read at (1) above has submitted the proposal to obtain the approval of Government of India under section 2 of the Forest (Conservation) Act, 1980 for diversion of 0.81 ha. of forest land in Sy. No. 118 of Malavalli Range, Malavalli Taluk, Mandya District for construction of water supply scheme to Netkal and other 4 villages under Rajiv Gandhi National Drinking Water Scheme in favour of the Assistant Executive Engineer, Panchayat Raj Engineering Sub-Division, Malavalli.

Accordingly, the proposal was recommended to Government of India vide State Government Letter dated : 11-06-2009 read at (2) above.

Government of India, Ministry of Environment and Forests, Regional Office, South Zone, Bangalore vide their letter dated : 05-08-2009 read at (3) above conveyed its approval (Stage-I) under Section 2 of the Forest (Conservation) Act, 1980 for diversion of 0.81 ha. of forest land in Sy. No. 118 of Malavalli Range, Malavallil Taluk, Mandya District for construction of water supply scheme to Netkal and other 4 villages under Rajiv Gandhi National Drinking Water Scheme in favour of the Assistant Executive Engineer, Panchayat Raj Engineering Sub-Division, Malavalli subject to fulfilment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated : 23-11-2009 read at 4 above furnished the compliance report and the same has been sent to Government of India vide State Government letter dated : 06—01-2010 read at 5 above.

Government of India, Ministry of Environment and Forests, Regional Office, South Zone, Bangalore vide letter dated : 05-08-2009 read at (6) above conveyed its approval (Stage-II) under Section 2 of the Forest (Conservation) Act, 1980 for diversion of 0.81 ha. of forest land in Sy. No. 118 of Malavalli Range, Malavalli Taluk, Mandya District for construction of water supply scheme to Netkal and other 4 villages under Rajiv Gandhi National Drinking Water Scheme in favour of the Assistant Executive Engineer, Panchayat Raj Engineering Sub-Division, Malavalli subject to certain conditions.

The proposal has been examined in detail and hence the order.

GOVERNMENT ORDER NO. FEE 87 FLL 2009, BANGALORE, DATED : 07-04-2010

In the circumstances explained in the preamble above, Government are pleased to accord sanction under section (2) of Forest (Conservation) Act 1980 for diversion of 0.81 ha. of forest land in Sy. No. 118 of Malavalli Range, Malavalli Taluk, Mandya District for construction of water supply scheme to Netkal and other 4 villages under Rajiv Gandhi National Drinking Water Scheme in favour of the Assistant Executive Engineer, Panchayat Raj Engineering Sub-Division, Malavalli subject to the following conditions :

1. The legal status of forest land shall remain unchanged.
2. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the State Government from the user agency and the same shall be transferred to Ad-hoc CAMPA in account number CA-1582 of Corporation Bank, Block-II, CGO Complex, Phase-I, Lodhi Road, New Delhi-110 003.
3. The total forest area utilized for the project shall not exceed 0.81 ha. in case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
4. The land shall be utilized only for the purpose for which it is released.
5. If the land is not required for the purpose for which it is granted the same should be resumed back to the Forest Department by the Conservator of Forests under section 82 of Karnataka Forest Act, 1963.
6. The user agency has to pay the lease rent as fixed by the Government at the time of sanction and any subsequent orders in this regard.
7. The lease is granted for 20 years.
8. The user agency has to pay the cost of plantation raised as fixed by the Deputy Conservator of Forests.
9. The Karnataka Forest Department will have to be provided suitable land/water for its nursery purpose, by the user agency.
10. Any other conditions to be imposed by the Government of India/Government of Karnataka/Principal Chief Conservator of Forests will be abided by the lessee.

By Order and in the name of theGovernor of Karnataka

H.M. Mallikarjuna Swamy

PR NO. 1056

Under Secretary to Government
Forest, Ecology and Environment Department

COMMERCE & INDUSTRIES SECRETARIAT

Sub :- Approval to the Project Proposal of M/s. Bramhani Industries Ltd., to establish a "6 Million MTPA Integrated Steel Plant with Captive Power Generation" in Bellary District.

Read :- Proceedings of the 21st State High Level Clearance Committee (SHLCC) meeting held on 29-03-2010.

Preamble:

M/s. Bramhani Industries Ltd., proposes to establish a "6 Million MTPA Integrated Steel Plant with Captive Power Generation" in two phases with an investment of Rs. 36,000 crores, generating employment to about 25000 persons in the Special Industrial Zone to be set up by Vijayanagara Area

Development Authority (VADA) in Bellary District. The company has proposed to establish 1.9 Million MTPA Steel and 68 MW Captive Power Plant in the first phase.

In the 21st State High Level Clearance Committee (SHLCC) meeting held on 29-03-2010 the proposal of the Company has been approved.

Government has examined the recommendations made by the State High Level Clearance Committee in the 21st meeting held on 29-03-2010 in all aspects.

Hence the following Order.

Government Order No. CI 122 SPI 2010, Bangalore, dated : 26-04-2010

Government is pleased to accord in principle approval to the project proposal of M/s. Bramhani Industries Ltd., to establish a "6 Million MTPA Integrated Steel Plant with Captive Power Generation" in two phases with an investment of Rs. 36,000 crores, generating employment to about 25000 persons in the Special Industrial Zone to be set up by Vijayanagara Area Development Authority (VADA) in Bellary District and extend the following infrastructure facilities, incentives and concessions. Approval is also accorded to the company to establish 1.9 Million MTPA Steel and 68 MW Captive Power Plant in the first phase.

Infrastructure Facilities :

1. **Land :** 4000 acres in Special Industrial Zone to be setup in Bellary, Hospet and Sandur Taluks by Vijayanagara Area Development Authority.
2. **Power :** 163 MVA to be serviced by GESCOM till completion of Captive Power Plant
3. **Water :** 1 Phase -2 TMC and II Phase -2 TMC, total 4 TMC (68.40 MGD) of water from the downstream of Alamatti Dam-Krishna river subject to approval of Water Resources Department.
4. **Incentives and Concessions :** Special incentives and concessions will be considered separately.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from DSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub-assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy

of such projects shall be sent to the Commissioner for I.D. & Director of Industries and Commerce for monitoring.

6. **Others :**

   a) The project proponents shall provide employment to at least one member of the family of each land looser as the land is being acquired through VADA.

   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate)**

P.R. 1127

Desk Officer (Technical Cell)

Commerce & Industries Department

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಎನ್. ಬಿ. ವಿಶ್ವನಾಥ್, ಅಪರ ಸರ್ಕಾರಿ ವಕೀಲರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರ ಸೇವಾವಧಿಯನ್ನು ಮುಂದುವರೆಸುವ ಬಗ್ಗೆ :–

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಲಾ 88 ಎಲ್ಎಜಿ 2008, ದಿನಾಂಕ 02–12–2008
2) ಅಡ್ವೋಕೇಟ್ ಜನರಲ್‌ರವರ ಅರೆ ಸರ್ಕಾರಿ ಪತ್ರ ಸಂಖ್ಯೆ : 131/ಎಜಿಪಿ/2009–10, ದಿನಾಂಕ 05–10–2009.
3) ಸರ್ಕಾರಿ ಅಧಿಸೂಚನೆ ಸಂಖ್ಯೆ : ಲಾ 31 ಎಲ್ಎಜಿ 2009 (ಭಾ) ದಿನಾಂಕ 02–12–2009.
4) ಅಡ್ವೋಕೇಟ್ ಜನರಲ್‌ರವರ ಕಛೇರಿಯ ಪತ್ರ ಸಂಖ್ಯೆ : 551/ಎಜಿ/ಇಎಸ್‌ಟಿ/2009–10, ದಿನಾಂಕ 19–03–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ಸರ್ಕಾರಿ ಆದೇಶದಲ್ಲಿ ಅಡ್ವೋಕೇಟ್ ಜನರಲ್ ರವರ ಕಛೇರಿಯಲ್ಲಿ ಹೆಚ್ಚುವರಿಯಾಗಿ ಒಂದು ಅಪರ ಸರ್ಕಾರಿ ವಕೀಲರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಿ ಸದರಿ ಹುದ್ದೆಗೆ ಶ್ರೀ ಎನ್. ಬಿ. ವಿಶ್ವನಾಥ್, ವಕೀಲರು, ಇವರನ್ನು ಒಂದು ವರ್ಷದ ಅವಧಿಗೆ ನೇಮಿಸಲಾಗಿತ್ತು. ನಂತರ ಕ್ರಮ ಸಂಖ್ಯೆ : (2)ರ ಅರೆ ಸರ್ಕಾರಿ ಪತ್ರದಲ್ಲಿ ಕೋರಿರುವಂತೆ ಸದರಿ ವಕೀಲರ ಸೇವಾವಧಿಯನ್ನು ದಿನಾಂಕ 02–12–2009 ರಿಂದ ಮತ್ತೊಂದು ಅವಧಿಗೆ ಮುಂದುವರೆಸುವಂತೆ ಕೋರಲಾಗಿರುತ್ತದೆ. ತದನಂತರ ಕ್ರಮ ಸಂಖ್ಯೆ : (3)ರ ಸರ್ಕಾರಿ ಆಧಿಸೂಚನೆಯಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಬಾಕಿ ಇರಿಸಿ ದಿನಾಂಕ : 03–12–2009 ರಿಂದ ಜಾರಿಗೆ ಬರುವಂತೆ ಸದರಿ ವಕೀಲರ ಸೇವಾವಧಿಯನ್ನು ಎರಡು ವರ್ಷಗಳ ಅವಧಿಗೆ ಮುಂದುವರೆಸಲಾಗಿತ್ತು. ನಂತರ ಕ್ರಮ ಸಂಖ್ಯೆ : (4)ರ ಅಡ್ವೋಕೇಟ್ ಜನರಲ್ ಕಛೇರಿ ಪತ್ರದಲ್ಲಿ ಕೋರಿರುವಂತೆ ತಾತ್ಕಾಲಿಕವಾಗಿ ಸೃಜಿಸಿ ಮುಂದುವರೆಸಲಾಗಿರುವ ಹುದ್ದೆಯನ್ನು ನಿಯಮಾನುಸಾರ ಸಕ್ರಮಗೊಳಿಸುವಂತೆ ಕೋರಲಾಗಿರುತ್ತದೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಲಾ 31 ಎಲ್ಎಜಿ 2009 (ಭಾ–2) ಬೆಂಗಳೂರು, ದಿನಾಂಕ 20–04–2010

ಸರ್ಕಾರದ ಆದೇಶ ಸಂಖ್ಯೆ : ಲಾ 88 ಎಲ್ಎಜಿ 2008, ದಿನಾಂಕ 02–12–2008ರಲ್ಲಿ ಅಡ್ವೋಕೇಟ್ ಜನರಲ್ ಕಛೇರಿಯಲ್ಲಿ ಸೃಜಿಸಲಾದ ಒಂದು ಹೆಚ್ಚುವರಿ ಅಪರ ಸರ್ಕಾರಿ ವಕೀಲರ ಹುದ್ದೆಯ ಅವಧಿಯನ್ನು ದಿನಾಂಕ 03–12–2009

ರಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲಾಗಿದೆ.

ಇದನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : 7 ವೆಚ್ಚ–10/2009, ದಿನಾಂಕ : 16–01–2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಇ. **ಶಿವಾನಂದ**)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1128

ENERGY SECRETARIAT

Addendum

No. EN 30 PPC 2010, Bangalore, dated 27th April 2010

In the Order portion of the Government Order No. EN 30 PPC 2010 dated 03-04-2010, the following shall be added to the last para **"and will be in force till 30th June 2010 or until further Orders whichever is earlier"**

By Order and in the name of the Governor of Karnataka
(**S. J. Sampath Kumar)**
Under Secretary to Government
Energy Department

P.R. 1129

ಇಂಧನ ಸಚಿವಾಲಯ

ವಿಷಯ : ಶ್ರೀ ಶಿವಯೋಗಿ, ಸಿ. ಕಳಸದ್, ನಿರ್ದೇಶಕರು (ಆಡಳಿತ ಮತ್ತು ಹೆಚ್. ಆರ್.) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರು ಉಪಕರಣಗಳ ಪರಿವೀಕ್ಷಣೆಗಾಗಿ ಇಸ್ರೇಲ್‌ಗೆ ನಿಯೋಜಿಸುವ ಬಗ್ಗೆ :–

ಓದಲಾಗಿದೆ : 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಕೆಪಿಟಿಸಿಎಲ್/ಎಂಡಿ/ಪಿಎಸ್/2009–10, ದಿನಾಂಕ 30–03–2010.

2) ನಿರ್ದೇಶಕರು (ಆಡಳಿತ ಮತ್ತು ಹೆಚ್.ಆರ್.) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ : ಕೆಪಿಟಿಸಿಎಲ್/ಡಿ (ಎ ಮತ್ತು ಹೆಚ್‌ಆರ್)/ ಪಿಎಸ್/2010–11, ದಿನಾಂಕ 22–04–2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಅರೆ ಸರ್ಕಾರಿ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇವರು ಮೆ॥ ಎ.ಬಿ.ಬಿ. ಲಿಮಿಟೆಡ್ ಇವರು ದಿನಾಂಕ 12–04–2010 ರಿಂದ 16–04–2010 ರವರೆಗೆ ಇಸ್ರೇಲ್‌ನಲ್ಲಿ V-SAT ಉಪಕರಣಗಳನ್ನು ಫ್ಯಾಕ್ಟರಿ ಆವರಣದಲ್ಲಿ ಪರಿವೀಕ್ಷಣೆ ಮಾಡಲು ಕಳುಹಿಸಿಕೊಡುವಂತೆ ಕೋರಿರುತ್ತಾರೆಂದು ಈ ವಿಷಯವನ್ನು ದಿನಾಂಕ 26–03–2010ರ ಕೆ.ಪಿ.ಟಿ.ಸಿ.ಎಲ್. ನಿರ್ದೇಶಕರ ಮಂಡಳಿಯ ಮುಂದೆ ಮಂಡಿಸಿದ್ದು ಮಂಡಳಿಯು ಶ್ರೀ ಶಿವಯೋಗಿ, ಸಿ. ಕಳಸದ್. ನಿರ್ದೇಶಕರು (ಆಡಳಿತ ಮತ್ತು ಹೆಚ್. ಆರ್.) ಇವರ ನೇತೃತ್ವದಲ್ಲಿ 3 ಅಭಿಯಂತರರುಗಳನ್ನು ಕಳುಹಿಸಲು ಅನುಮೋದಿಸಿದೆಯೆಂದು ತಿಳಿಸಿರುತ್ತಾರೆ. ಈ ನಿಯೋಜನೆಯ ಪ್ರಯಾಣ ಮತ್ತು ವಸತಿಗೆ ತಗಲುವ ಎಲ್ಲಾ ವೆಚ್ಚವನ್ನು M/s ABB Limited ಇವರು ಭರಿಸುತ್ತಾರೆಂದು ತಿಳಿಸಿ, ಸರ್ಕಾರದ ಅನುಮತಿಯನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ನಿರ್ದೇಶಕರು (ಆಡಳಿತ ಮತ್ತು ಹೆಚ್. ಆರ್.) ಕೆ.ಪಿ.ಟಿ.ಸಿ.ಎಲ್. ಇವರು ಯುರೋಪ್‌ನಲ್ಲಿ ಜ್ವಾಲಾಮುಖಿಯ ಹೊಗೆಯ ಹಿನ್ನೆಲೆಯಲ್ಲಿ ವಿಮಾನ ಹಾರಾಟವನ್ನು ರದ್ದುಪಡಿಸಿರುವುದರಿಂದ ದಿನಾಂಕ

12-04-2010 ರಂದು ಕೈಗೊಳ್ಳಬೇಕಾಗಿದ್ದ ಪ್ರವಾಸವನ್ನು ರದ್ದುಪಡಿಸಿ ಅದರ ಬದಲಾಗಿ ದಿನಾಂಕ 01-05-2010 ರಿಂದ 08-05-2010ರವರೆಗೆ ಪ್ರವಾಸ ಕೈಗೊಳ್ಳಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಇಎನ್ 72 ಇಇಬಿ 2010, ಬೆಂಗಳೂರು, ದಿನಾಂಕ 28-04-2010

ಶ್ರೀ ಶಿವಯೋಗಿ, ಸಿ. ಕಳಸದ್, ನಿರ್ದೇಶಕರು (ಆಡಳಿತ ಮತ್ತು ಹೆಚ್. ಆರ್.) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ಇವರನ್ನು ಇಸ್ರೇಲ್ ದೇಶದಲ್ಲಿರುವ ಮೆ॥ ಎ.ಬಿ.ಬಿ. ಲಿಮಿಟೆಡ್ ಸಂಸ್ಥೆಯ ಕಾರ್ಖಾನೆಯಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಸರಬರಾಜಾಗುವ ಉಪಕರಣಗಳ ಪರಿವೀಕ್ಷಣೆ ಸಂಬಂಧ ದಿನಾಂಕ 01-05-2010 ರಿಂದ 08-05-2010 ರವರೆಗೆ ಇಸ್ರೇಲ್ ದೇಶದ ಪ್ರವಾಸಕ್ಕೆ ಸರ್ಕಾರದ ಅನುಮತಿಯನ್ನು ಈ ಕೆಳಗಿನ ಷರತ್ತಿಗೊಳಪಟ್ಟು ನೀಡಲಾಗಿದೆ :-

1. ಈ ಅಧಿಕಾರಿಯವರ ಮೇಲ್ಕಂಡ ವಿದೇಶ ಪ್ರವಾಸಕ್ಕೆ ತಗಲುವ ಪೂರ್ಣ ವೆಚ್ಚವನ್ನು M/s ABB Limited ವತಿಯಿಂದ ಭರಿಸತಕ್ಕದ್ದು.
2. ಅಧಿಕಾರಿಯವರು ವಿದೇಶ ಪ್ರವಾಸದಿಂದ ಹಿಂದಿರುಗಿ ಬಂದ 15 ದಿವಸಗಳೊಳಗಾಗಿ ಪ್ರವಾಸದ ವರದಿಯನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-1)ಯ ಟಿಪ್ಪಣಿ ಸಂಖ್ಯೆ : ಸಿಆಸುಇ 117 ಆಸೇಇ 2010 ದಿನಾಂಕ 09-04-2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ಜೆ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 1130

PERSONAL AND ADMINISTRATIVE REFORMS SECRETARIAT

Sub :- Regarding adverse remarks in the Annual Confidential Report of Sri H. C. Kishore Chandra, IPS (KN-84) for the Reporting year 2001-02.

Read :-
1. Government Order No. DPAR No. 30 SPS 2004, dated 01-09-2007
2. Government Order No. DPAR 30 SPS 2004, dated 23-07-2009
3. Representation dated 25-7-2009, 28-7-2009 & 01-08-2009 of Sri H. C. Kishore Chandra, IPS
4. State Government's letter dated 26-8-2009 addressed to the Secretary to the Government of India, Ministry of Home Affairs, New Delhi.
5. Letter No. 17048/6/2004-IPS-II, dated 15-12-2009 of Government of India, Ministry of Home Affairs, New Delhi.
6. Letter dated 17-3-2010 of Sri H. C. Kishore Chandra, IPS

Preamble:

In the Government Order dated 23-7-2009 read at Sl. No. 2 above, all the adverse remarks in the ACR of Sri H. C. Kishore Chandra, IPS (KN-84) for the year 2001-02 were expunged. However, in the last para of the said GO, it has been ordered that the overall grading of "Below Average" recorded by the Reporting and Reviewing Authority shall be retained unchanged Sri Kishore Chandra has submitted representations dated 25-7-2009, 28-7-2009 and 01-8-2009 against retaining the "Below Average" grading in the ACR and has requested to issue modified orders. The matter was taken up with the Government of India, Ministry of Home Affairs and a detailed proposal was sent vide letter dated 26-8-2009 read at Sl. No. 4 above. The Government of India have sent reply vide their letter dated 15-12-2009 read at Sl. No. 5 above. While drawing attention to the Government of India DOPT's letter No. 11059/6/2009/AIS-III, dated 4-12-2009, the Government of India has informed to take necessary action for issuing revised orders in the light of the instructions contained in the said letter dated 4-12-2009 in the Government of India letter dated 4-12-2009 it is mentioned that "if the adverse remarks of Reporting /Reviewing/Accepting authorities are expunged by the Government the "overall grading" be kept blank for

appropriate re-grading by Empanelment Committee/DPC" Sri H. C. Kishore Chandra in his letter dated : 17-3-2010 read at Sl. No. 6 above has requested to issue appropriate revised orders in the matter. The matter has been examined in the light of the Government of India's instructions contained in their letter dated 4-12-2009 and it has been decided to issue revised order in supersession of GO dated 01-09-2007 and 23-7-2009 for expunging all the adverse remarks and also to keep blank the overall grading for appropriate regrading by Empanelment Committee/DPC's Accordingly, the following Orders are issued.

Government Order No. DPAR 30 SPS 2004, Bangalore, dated : 19-04-2010

In supersession of Government Order of even No. dated 01-9-2007 and 23-7-2009, the Government hereby order that the remarks recorded by the Reporting Authority and Reviewing Authority in the Annual Confidential Report of Sri H. C. Kishore Chandra, IPS (KN-84) for the reporting year 2001-02 communicated to him as adverse remarks vide DO letter No. Chs/66/2004, dated 24-1-2004 and reproduced in Go dated 23-7-2009, shall be expunged.

Further, the Government orders that the grading "Below Average" recorded by the Reporting Authority and Reviewing Authority in the said ACR shall be expunged and the overall grading be kept blank for appropriate regarding by Empanelment Committee/DPC's in accordance with the criteria laid down in the Government of India, DOPT's letter No. 11059/06/2009-AIS-III, dated 4-12-2009.

By Order and in the name of the Governor of Karnataka

(**Ashok, P. Atre)**

P.R. 1131

Under Secretary to Government

DPAR (Services-4)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿ ಬರುವ 18 ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸುವ ಬಗ್ಗೆ :–

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 19–04–2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ–6/ಹಾಗೂ 9/2010–11/2585.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 19–04–2010ರ ಪತ್ರದಲ್ಲಿ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಸಣ್ಣ ನೀರಾವರಿ ವಿಭಾಗ, ಬಿಜಾಪುರ ವ್ಯಾಪ್ತಿಯಲ್ಲಿ ಈ ಕೆಳಕಂಡ 18 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿರುವುದಾಗಿ ತಿಳಿಸಿ ಸದರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ.

ಕ. ಸಂ.	ತಾಲ್ಲೂಕು	ಯೋಜನೆ	ನಿರ್ಮಾಣವಾದ ವರ್ಷ
1	ಸಿಂದಗಿ	ಕಡ್ಲೇವಾಡ ಏತ ನೀರಾವರಿ ಯೋಜನೆ	1981
2	ಸಿಂದಗಿ	ದೇವಣಗಾಂ ಏತ ನೀರಾವರಿ ಯೋಜನೆ	1980
3	ಸಿಂದಗಿ	ಬಾಗಲೂರ ಏತ ನೀರಾವರಿ ಯೋಜನೆ	1981
4	ಸಿಂದಗಿ	ತಾರಾಪೂರ ಏತ ನೀರಾವರಿ ಯೋಜನೆ	1973
5	ಇಂಡಿ	ಶಿರನಾಳ ಏತ ನೀರಾವರಿ ಯೋಜನೆ	1976
6	ಇಂಡಿ	ಬರಗುಡಿ ಏತ ನೀರಾವರಿ ಯೋಜನೆ	1977
7	ಇಂಡಿ	ಅಣಚಿ ಏತ ನೀರಾವರಿ ಯೋಜನೆ	1976
8	ಇಂಡಿ	ದೂಳಖೇಡ ಏತ ನೀರಾವರಿ ಯೋಜನೆ	1976

9	ಇಂಡಿ	ಅಗರಖೇಡ ಏತ ನೀರಾವರಿ ಯೋಜನೆ	1975
10	ಇಂಡಿ	ಗುಬ್ಬೇವಾಡ ಏತ ನೀರಾವರಿ ಯೋಜನೆ	1977
11	ಇಂಡಿ	ಸಂಖ ಏತ ನೀರಾವರಿ ಯೋಜನೆ	1976
12	ಇಂಡಿ	ಉಮರಜ ಏತ ನೀರಾವರಿ ಯೋಜನೆ	1976
13	ಮುದ್ದೇಬಿಹಾಳ	ಮಸೂತಿ ಏತ ನೀರಾವರಿ ಯೋಜನೆ	1976
14	ಜಮಖಂಡಿ	ಬಿದರಿ ಏತ ನೀರಾವರಿ ಯೋಜನೆ	1976
15	ಬಾಗಲಕೋಟ	ಮುರನಾಳ ಏತ ನೀರಾವರಿ ಯೋಜನೆ	1970
16	ಬಾಗಲಕೋಟ	ಅನದಿನ್ನಿ ಏತ ನೀರಾವರಿ ಯೋಜನೆ	1974
17	ಬಾಗಲಕೋಟ	ಕಲಾದಗಿ ಏತ ನೀರಾವರಿ ಯೋಜನೆ	1974
18	ಬಾಗಲಕೋಟ	ಬೆಣ್ಣೂರ ಏತ ನೀರಾವರಿ ಯೋಜನೆ	1974

ಮುಖ್ಯ ಇಂಜಿನಿಯರ್‌ರವರ ವರದಿಯ ಪ್ರಕಾರ ಮೇಲ್ಕಂಡ ಏತ ನೀರಾವರಿ ಯೋಜನೆಗಳು ಕೆಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿ ಕೆಲವೊಂದು ಕಾರಣಗಳಿಂದ ಸ್ಥಗಿತಗೊಂಡಿವೆ. ಮೇಲಿನ ಕ್ರಮ ಸಂ. 1 ರಿಂದ 12 ರವರೆಗಿನ ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟಿನೊಂದಿಗೆ ವಿಲೀನಗೊಂಡಿದ್ದರಿಂದ ಅಲ್ಲಿನ ರೈತರು ಏತ ನೀರಾವರಿ ಯೋಜನೆಗಳಿಂದ ನೀರಿನ ಬೇಡಿಕೆ ನಿಲ್ಲಿಸಿದ್ದರಿಂದ ಈ ಯೋಜನೆಗಳೂ ಸ್ಥಗಿತಗೊಂಡಿವೆ. ಕ್ರ. ಸಂ. : 13 ಮತ್ತು 14 ರಲ್ಲಿನ ಏತ ನೀರಾವರಿ ಯೋಜನೆಗಳು ಕಾರ್ಯಾರಂಭ ಮಾಡಿದ ಕೆಲವು ವರ್ಷಗಳವರೆಗೆ ಕಾರ್ಯನಿರ್ವಹಿಸಿದ್ದು, ತದನಂತರ ಸಮರ್ಪಕವಾದ ವಿದ್ಯುತ್ ಸೌಲಭ್ಯ ಲಭ್ಯವಾಗದ ಕಾರಣ ಅಲ್ಲಿಯ ರೈತರು ಸ್ವಂತ ಪಂಪ್‌ಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಿಕೊಂಡಿದ್ದಾರೆ. ಹೀಗಾಗಿ ಈ ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿವೆ. ಕ್ರ.ಸಂ. 15 ರಿಂದ 18ರಲ್ಲಿರುವ ಏತ ನೀರಾವರಿ ಯೋಜನೆಗಳ ಪಂಪ್‌ಹೌಸ್, ಇನ್‌ಟೇಕ್‌ವೆಲ್, ರೈಸಿಂಗ್ ಮೈನ್ ಹಾಗೂ ಅಚ್ಚುಕಟ್ಟು ಪ್ರದೇಶದ ಕೆಲವೊಂದು ಭಾಗ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಿರುವುದರಿಂದ ಈ ಏತ ನೀರಾವರಿ ಯೋಜನೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ.

ಮೆಲ್ಕಂಡಂತೆ ಎಲ್ಲಾ 18 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿದ್ದು, ಈ ಯೋಜನೆಯ ಅಚ್ಚುಕಟ್ಟಿನ ರೈತರಿಂದ ನೀರಿನ ಬೇಡಿಕೆ ಇಲ್ಲದಿರುವುದರಿಂದ ಇವುಗಳನ್ನು ಪುನಃಶ್ಚೇತನಗೊಳಿಸುವ ಅವಶ್ಯಕತೆ ಇರುವುದಿಲ್ಲ. ಯೋಜನೆಗಳಿಗೆ ಬಳಸಿರುವ ಯಂತ್ರ, ಕಟ್ಟಡ ಹಾಗೂ ಸಾಮಗ್ರಿಗಳು ನಶಿಸುವ ಹಂತದಲ್ಲಿರುವುದರಿಂದ ಈ ಬಗ್ಗೆ ಪರಿಶೀಲಿಸಿ ಈ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಿ, ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಸನೀಇ 29 ಏನೀಯೋ 2010, ಬೆಂಗಳೂರು, ದಿನಾಂಕ 27–04–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 'ಸಣ್ಣ ನೀರಾವರಿ ವಿಭಾಗ, ಬಿಜಾಪುರ ವ್ಯಾಪ್ತಿಯಲ್ಲಿ ಬರುವ ಪ್ರಸ್ತಾವನೆಯಲ್ಲಿ ತಿಳಿಸಿರುವ 18 ಏತ ನೀರಾವರಿ ಯೋಜನೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಿಷ್ಕ್ರಿಯಗೊಳಿಸಲು ಸರ್ಕಾರದ ಅನುಮೋದನೆ ನೀಡಿದೆ.

1) ನಿಷ್ಕ್ರಿಯಗೊಳಿಸುವ ಏತ ನೀರಾವರಿ ಯೋಜನೆಗಳ ಸ್ಥಳಗಳಲ್ಲಿ ಮುಂದಿನ ದಿನಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ನಿರ್ಮಿಸದಿರುವ ಬಗ್ಗೆ ಜಾಗ್ರತೆ ವಹಿಸುವುದು.
2) ಪ್ರಸ್ತಾಪಿತ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸುವ ಸಂದರ್ಭದಲ್ಲಿ ಕಾರ್ಯದರ್ಶಿಗಳು, ಸಣ್ಣ ನೀರಾವರಿ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 06–04–2006 ಮತ್ತು 07–04–2006 ರಂದು ನಡೆದ ಸಭೆಯ ನಡವಳಿಯಲ್ಲಿಯ ಸೂಚನೆಗಳಂತೆ ಕ್ರಮ ಕೈಗೊಳ್ಳುವುದು.
3) ಈ ಏತ ನೀರಾವರಿ ಯೋಜನೆಗಳನ್ನು ನಿಷ್ಕ್ರಿಯಗೊಳಿಸುವುದರಿಂದ ಯೋಜನೆಗಾಗಿ ಬಳಸಿರುವ ಯಂತ್ರೋಪಕರಣಗಳನ್ನು ಇತರೆ ಯೋಜನೆಗಳಿಗೆ ಅಳವಡಿಸಿಕೊಳ್ಳುವುದು ಹಾಗೂ ನಿರುಪಯುಕ್ತ ಯಂತ್ರೋಪಕರಣಗಳನ್ನು ನಿಯಮಾನುಸಾರ ವಿಲೇ ಮಾಡಲು ಕ್ರಮ ಜರುಗಿಸುವುದು.
4) ಈ ಏತ ನೀರಾವರಿ ಯೋಜನೆಗಳಿಗಾಗಿ ನಿರ್ಮಿಸಿರುವ ಕಟ್ಟಡ ಹಾಗೂ ಜಮೀನುಗಳನ್ನು ನಿಯಮಾನುಸಾರ ವಿಲೇ ಮಾಡಲು ಹಾಗೂ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಲು ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1132

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ, ತರಬೇತಿ ಮತ್ತು ರಾಜಕೀಯ ವಿಶ್ರಾಂತಿ ವೇತನ) ಯಲ್ಲಿನ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ಮುಂದುವರೆಸುವ ಬಗ್ಗೆ :–

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 206 ಸಅಸೇ 2009, ದಿನಾಂಕ : 20–04–2009
2. ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ/ಅಸು/2010, ದಿನಾಂಕ : 26–03–2010

ಪ್ರಸ್ತಾವನೆ :

ಸಿಬ್ಬಂದಿ ಮತ್ತು ಆಡಳಿತ ಸಧಾರಣಾ ಇಲಾಖೆ (ಆಡಳಿತ ಸುಧಾರಣೆ, ತರಬೇತಿ ಮತ್ತು ರಾಜಕೀಯ ವಿಶ್ರಾಂತಿ ವೇತನ)ಯಲ್ಲಿ ಸೃಜಿಸಲಾಗಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಯೊಂದಿಗೆ ಈ ಕೆಳಕಂಡ ಪೂರಕ ಸಿಬ್ಬಂದಿ ಹುದ್ದೆಗಳನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗಿದ್ದು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 20–04–2009 ರ ಆದೇಶದಲ್ಲಿ ಈ ಹುದ್ದೆಗಳನ್ನು ದಿನಾಂಕ 01–04–2009 ರಿಂದ 31–03–2010 ರವರೆಗೆ ಮುಂದುವರಿಸಲಾಗಿತ್ತು.

ಕ್ರ. ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಆಪ್ತ ಕಾರ್ಯದರ್ಶಿ (ಆಪ್ತ ಕಾರ್ಯದರ್ಶಿ ಗ್ರೇಡ್–2)/ಪತ್ರಾಂಕಿತ ಆಪ್ತ ಸಹಾಯಕ	1 ಹುದ್ದೆ
2	ಶೀಘ್ರಲಿಪಿಗಾರರು/ಹಿರಿಯ ಶೀಘ್ರಲಿಪಿಗಾರರು/ಪತ್ರಾಂಕಿತ ಆಪ್ತ ಸಹಾಯಕರು	2 ಹುದ್ದೆಗಳು
3	ಭಾಷಾಂತರಕಾರರು (ಶಾಖಾಧಿಕಾರಿ/ಹಿರಿಯ ಸಹಾಯಕ)	1 ಹುದ್ದೆ
4	ಸಹಾಯಕರು (ಹಿರಿಯ ಸಹಾಯಕ/ಸಹಾಯಕ)	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ದಲಾಯತ್	2 ಹುದ್ದೆಗಳು
	ಒಟ್ಟು ...	**8 ಹುದ್ದೆಗಳು**

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಪ್ರಧಾನ ಕಾರ್ಯದರ್ಶಿ ಸಿಆಸುಇ (ಆಡಳಿತ ಸುಧಾರಣೆ) ಅವರು ನೀಡಿದ ಅಭಿಪ್ರಾಯವನ್ನು ಪರಿಶೀಲಿಸಿದ ನಂತರ ಮೇಲಿನ ಹುದ್ದೆಗಳನ್ನು ಸದ್ಯಕ್ಕೆ ಒಂದು ವರ್ಷದ ಅವಧಿಗೆ ಮುಂದುವರಿಸಲು ತೀರ್ಮಾನಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 186 ಸಅಸೇ 2010, ಬೆಂಗಳೂರು, ದಿನಾಂಕ 12–04–2010

ಕರ್ನಾಟಕ ಸರ್ಕಾರದ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ, ತರಬೇತಿ ಮತ್ತು ರಾಜಕೀಯ ವಿಶ್ರಾಂತಿ ವೇತನ) ಯಲ್ಲಿ ತಾತ್ಕಾಲಿಕವಾಗಿ ಸೃಜಿಸಲಾಗಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆ ಹಾಗೂ ಈ ಕೆಳಕಂಡ ಪೂರಕ ಹುದ್ದೆಗಳನ್ನು ದಿನಾಂಕ 01–04–2010 ರಿಂದ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಿದೆ.

ಕ್ರ. ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಆಪ್ತ ಕಾರ್ಯದರ್ಶಿ (ಆಪ್ತ ಕಾರ್ಯದರ್ಶಿ ಗ್ರೇಡ್–2)/ಪತ್ರಾಂಕಿತ ಆಪ್ತ ಸಹಾಯಕ	1 ಹುದ್ದೆ
2	ಶೀಘ್ರಲಿಪಿಗಾರರು/ಹಿರಿಯ ಶೀಘ್ರಲಿಪಿಗಾರರು/ಪತ್ರಾಂಕಿತ ಆಪ್ತ ಸಹಾಯಕರು	2 ಹುದ್ದೆಗಳು
3	ಭಾಷಾಂತರಕಾರರು (ಶಾಖಾಧಿಕಾರಿ/ಹಿರಿಯ ಸಹಾಯಕ)	1 ಹುದ್ದೆ
4	ಸಹಾಯಕರು (ಹಿರಿಯ ಸಹಾಯಕ/ಸಹಾಯಕ)	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ದಲಾಯತ್	2 ಹುದ್ದೆಗಳು
	ಒಟ್ಟು ...	**8 ಹುದ್ದೆಗಳು**

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10–07–1996 ರಲ್ಲಿ ಪ್ರತ್ಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ. ಎಸ್. ಶಿವರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಪಿ.ಆರ್. 1133